ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಎಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ, ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ, ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಡಿ.ಎಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ, ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಡಿ.ಎಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ವೃತ್ತಿ ಶಿಕ್ಷಣ ನಯಂತ್ರಣ ಶುಲ್ಕ ನಿಗದಿ ಕಾನೂನನ್ನು ನಾವು ಒಂದು ವರ್ಷಕ್ಕೆ ಅಂದರೆ 2006ರಲ್ಲಿ pass ಮಾಡಿದ ಕಾನೂನನ್ನು ಈ Private un-aided Institutions ಜೊತೆಗೆ ನಡೆದ ಮಾತುಕತೆ ಹಿನ್ನಲೆಯಲ್ಲಿ Supreme Court ಆ ಮಾತುಕತೆಯ ಸಾರಾಂಶವನ್ನು ಎತ್ತಿಹಿಡಿದ ಹಿನ್ನಲೆಯಲ್ಲಿ 2006ರ ಏಪ್ರಿಲ್‌ನಲ್ಲಿ pass ಮಾಡಿದ ನಿಯಮಾವಳಿಗಳನ್ನು ಒಂದು ವರ್ಷಕ್ಕೆ ತಡೆಹಿಡಿಯಬೇಕೆಂದು ಕಳೆದ ಸದನದಲ್ಲಿ ತಾವೆಲ್ಲ ಒಪ್ಪಿಗೆ ಕೊಟ್ಟಿದ್ದಿರಿ.

ಅದೇ ರೀತಿ ಈ ವರ್ಷವೂ ಅವರ ಜೊತೆ ಮಾತುಕತೆ ನಡೆಸಿ, C.E.T. ನಲ್ಲಿ ಮಕ್ಕಳಿಗೆ ಅನುಕೂಲವಾಗುವ ಹಾಗೆ ಈಗಾಗಲೇ admissions ಆಗುತ್ತಿದೆ. ಅದೇ ರೀತಿ ಈ ವರ್ಷದ ಮಾತುಕತೆಯನ್ನೂ ಸಹಾ ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ಒಂದು ವರ್ಷ ತಡೆಹಿಡಿದಿದ್ದ ಬಿಲ್‌ಅನ್ನು ಮತ್ತೊಂದು ವರ್ಷ ತಡಿಹಿಡಿಯಬೇಕು ಎನ್ನುವ ordinance ಅನ್ನು ನಾವು ಮಾಡಿದ್ದೇವೆ. ಅದನ್ನು ತಾವು ಮಾಡಿಕೊಡಬೇಕು ಎಂದು ನಾನು ಈ ಸದನದ ಮುಂದೆ ಮಂಡಿಸುತ್ತಿದ್ದೇನೆ. ಅದಕ್ಕೆ ತಾವೆಲ್ಲರೂ ದಯವಿಟ್ಟು ಒಪ್ಪಿಗೆ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಧರಂಸಿಂಗ್ [ಜೇವರ್ಗಿ]: ಮಾನ್ಯ ಅಧ್ಯಕ್ಷರೆ, ವೃತ್ತಿ ಶಿಕ್ಷಣದ ಬಗ್ಗೆ ಬಿಲ್‌ಅನ್ನು ತಂದಾಗ ಬಹಳಷ್ಟು ಸಲ ನಾವು, ಈ ಸರ್ಕಾರಕ್ಕೆ ಬದ್ಧತೆ ಇಲ್ಲ, ಇವರಿಗೆ ನಿಜವಾಗಿಯೂ ಕೂಡ ಕರ್ನಾಟಕ ರಾಜ್ಯದಲ್ಲಿರುವ ವಿದ್ಯಾರ್ಥಿಗಳ ಸಮಸ್ಯೆ ತಿಳಿದಿಲ್ಲ ಎನ್ನತಕ್ಕಂಥ ಆಪಾದನೆಯನ್ನು ಮಾಡಿದ್ದೇವೆ. ನಾವು, ರಮೇಶ್ ಕುಮಾರ್‌ರವರು ಮತ್ತು ಇತರ ಹಿರಿಯ ಸದಸ್ಯರುಗಳೆಲ್ಲರೂ ಇದನ್ನು Joint Select Committee ಗೆ ಕಳುಹಿಸಬೇಕು ಎಂದು ಹೇಳಿದ್ದೆವು. ಅದೂ ಕೂಡ ಆಗಲಿಲ್ಲ. ಹಳ್ಳಿಯ ಪ್ರದೇಶಗಳಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಿ ಕೊಡಬೇಕು ಎಂದು ನಾನು ಮುಖ್ಯಮಂತ್ರಿಯಾಗಿದ್ದಾಗ ಆರು ಮೆಡಿಕಲ್ ಕಾಲೇಜುಗಳನ್ನು ತೆಗೆಯತಕ್ಕಂಥ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೆವು. That was a historical decision. ಈ ರೀತಿಯಾದ್ದರಿಂದ ಇವತ್ತು ಬಹಳಷ್ಟು ಜನರಿಗೆ ರಾಯಚೂರು, ಬೀದರ್ ಹೀಗೆ ಎಲ್ಲಾ ಕಡೆಗಳಲ್ಲಿ ಮೆಡಿಕಲ್ ಕಾಲೇಜುಗಳಿಗೆ ಅವಕಾಶ ಸಿಗುತ್ತಿದೆ. ನಾವು ಮಾಡಿರುವುದನ್ನು ತಾವು ತೆಗೆದು ನೋಡಿ. Fee Structure ಬಗ್ಗೆಯಾಗಲೀ ಅಥವಾ ಇತರ ವಿಷಯಗಳ ಬಗ್ಗೆಯಾಗಲೀ, management ಮತ್ತು ಸರ್ಕಾರದ ಮಧ್ಯೆ ಇರತಕ್ಕಂಥ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಲಿಕ್ಕೆ ಎಷ್ಟು ಸಭೆ ಕರೆಸಿದ್ದೇನೆ ಎಂದು ನೋಡಿ. ಯಡಿಯೂರಪ್ಪನವರೂ ಆ ಸಭೆಯಲ್ಲಿ ಎಷ್ಟೋ ಸಲ ಭಾಗವಹಿಸಿದ್ದಾರೆ. ತಾವು ಕೂಡ ವಿಧಾನ ಪರಿಷತ್ತಿನ ಸಭಾನಾಯಕರಾಗಿ ಭಾಗವಹಿಸಿದ್ದೀರಿ. ಇವತ್ತು ನೀವು ನಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಹೋದ ಸಲ ಮಾಡಿದಂತೆಯೇ ಈ ಬಾರಿಯೂ ಮಾಡಿದ್ದೇವೆ ಎಂದು ಹೇಳಿದಿರಿ. ಹೋದ ಸಲ ಮಾಡಿದ್ದು ತಪ್ಪು

ಇದೆ. ನೀವು Management ನವರ ಮೊರೆ ಹೊಕ್ಕಿದ್ದೀರಿ ಎಂದು ನಾವು ಹೇಳಿದ್ದೇವೆ. Management ಮತ್ತು ಸರ್ಕಾರದ ಮಧ್ಯದಲ್ಲಿ ಸಂಧಾನವಾಗಿ, ಇವತ್ತಿನ ದಿವಸ ಬಡ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಲಾರದಂಥ ಜನ ವಿರೋಧಿ ಶಿಕ್ಷಣ ನೀತಿ ಇವತ್ತು ಇದೆ. ಏಕೆ ಹೀಗೆ ಮಾಡುತ್ತಿದ್ದಾರೆಂದು ಗೊತ್ತಿಲ್ಲ. ಹಿಂದೆ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ, ದೇಶದ ಸಾಕಷ್ಟು ಸಮಸ್ಯೆಗಳ ಬಗ್ಗೆ, ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾತನಾಡತಕ್ಕಂಥ ಶಂಕರಮೂರ್ತಿಯವರು ಇದನ್ನು ಒಂದು ವರ್ಷಕ್ಕೆ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಇದರಿಂದ ಸಾಕಷ್ಟು ಅನಾಹುತವಾಗುತ್ತಿದೆ. ಆದ್ದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಸಮಗ್ರವಾಗಿ ಚರ್ಚೆಯಾಗಬೇಕು. ಇವತ್ತು ಖಾಸಗಿ ಕಾಲೇಜುಗಳ ನಿಯಂತ್ರಣ ಅಂದರೆ monopoly ಯನ್ನು ಸರಿಪಡಿಸತಕ್ಕಂಥ ರೀತಿಯಲ್ಲಿ ಆಗಬೇಕು. ಅವರು ಕೆಲಸ ಮಾಡತಕ್ಕಂಥ ರೀತಿಯಲ್ಲಿ ನನಗೆ ಬೇರೆ ಅಭಿಪ್ರಾಯವಿಲ್ಲ. ಇವತ್ತು ಸಾಕಷ್ಟು ಬಡ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕಾಗಿದೆ. ಇದರಲ್ಲಿ ಈ ಸರ್ಕಾರ ಎಡವಿದೆ. ಮತ್ತು ಇದನ್ನು ಒಂದೇ ವರ್ಷಕ್ಕೆ ಮಾಡತಕ್ಕಂಥಾದ್ದಲ್ಲ. ಈ ಬಗ್ಗೆ ನಮ್ಮನ್ನು ನೀವು ಏನೂ ಕೇಳಿಲ್ಲ. ರಾಜ್ಯದ ಹಿತದೃಷ್ಟಿಯಿಂದ, ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಮಗ್ರವಾದ ಶಿಕ್ಷಣ ನೀತಿಯನ್ನು ತಾವು ಮಾಡಬೇಕು. ಇವತ್ತು ಏನಾಗುತ್ತಿದೆ ಎಂದು ತಮಗೆ ಗೊತ್ತಿಲ್ಲ. ಇದು ಸರಿಯಾದ ಕ್ರಮವಲ್ಲ ಎಂದು ಹೇಳಿ, ನಾನು ಈ ವಿಧೇಯಕಕ್ಕೆ ವಿರೋಧ ಮಾಡುತ್ತಿದ್ದೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ನಾನೇನು ಹೆಚ್ಚು ಹೇಳಲು ಹೋಗುವುದಿಲ್ಲ. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಏನು ಒಪ್ಪಂದಕ್ಕೆ ಬಂದರೋ ಗೊತ್ತಿಲ್ಲ. ಮೆಡಿಸಿನ್‌ದು ನಾನು ಮಾತನಾಡುತ್ತಿಲ್ಲ. ಇಂಜಿನಿಯರಿಂಗ್ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ಮೊದಲು ಇಂಜಿನಿಯರಿಂಗ್‌ಗೆ ಇಷ್ಟೊಂದು demand ಇರುತ್ತಿರಲಿಲ್ಲ. ಶಿಕ್ಷಣ ಸಂಸ್ಥೆಗಳವರು ಕಡೆಯವರೆಗೂ ವಿದ್ಯಾರ್ಥಿಗಳನ್ನು ಕರೆಸುತ್ತಿದ್ದರು. 40 ಸಾವಿರದ ರ್ಯಾಂಕ್ ಬಂದವನಿಗೂ ಕೂಡ ಸಿಗುತ್ತಿತ್ತು. ಈಗ ಕಾಮೆಡ್-ಕೆ ಎನ್ನುವುದನ್ನು ತಂದಿಟ್ಟಿರಿ. ಅವರ fee structure ಎಷ್ಟು? ಮುಚ್ಚುವ ಸ್ಥಿತಿಯಲ್ಲಿದ್ದ ಅನೇಕ ಇಂಜಿನಿಯರಿಂಗ್ ಕಾಲೇಜುಗಳವರೆಲ್ಲಾ

ಬಲಾಢ್ಯರಾಗಿಬಿಟ್ಟರು. ಈಗ 1,20,000 ರೂಪಾಯಿಗಳ ಫೀಸ್ ಇದೆ. C.E.T. ನಲ್ಲಿದ್ದಾಗ ಅದು ಎಷ್ಟಿತ್ತು ಎನ್ನುವುದನ್ನು ಸನ್ಮಾನ್ಯ ಶಿಕ್ಷಣ ಸಚಿವರು ಹೇಳಬೇಕು. ಇದು ಒಪ್ಪಂದವೇ? ನಮ್ಮ ಪರಿಸ್ಥಿತಿ ಏನಾಗಿದೆ ಎಂದು ನಾನು ಹೇಳಲೇ? ಈ ಸದನದ ಬಗ್ಗೆ ಪತ್ರಿಕೆಗಳು ಬರೆಯುವುದು, ಸಾಮಾನ್ಯ ಜನ ಮಾತನಾಡುವುದು ಏನೆಂದರೆ, ಎಲ್ಲ political party ಗಳಲ್ಲೂ private engineering college ಗಳಿರುವವರು ಇದ್ದಾರೆ, All party meeting ಮಾಡಿದಾಗ, ಸಂಧಾನಕ್ಕೆ ಸೇರಿದಾಗ ಇವರೆಲ್ಲರಲೂ ಒಂದೇ, ಇವರಿಗೆ ವ್ಯಾಪಾರದಲ್ಲಿಯೇ interest, ರಾಜ್ಯ ಜನ ಮುಖ್ಯವಲ್ಲ ಎಂದು ಮಾತನಾಡಿಕೊಳ್ಳುತ್ತಾರೆ. ಈಗ ಇವರು ಏನು ಮಾಡಿದ್ದಾರೆಂದರೆ, ಯಾವುದಾದರೂ ಒಂದು ಹುಡುಗ, C.E.T. ಗೆ ಅಥವಾ ಕಾಮೆಡ್‌ಗೆ admission ಗೆ ಹೋಗಬೇಕಾದರೆ, D.D. ಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಹೋಗಬೇಕು. ನಮ್ಮ ಊರಿನ ಒಬ್ಬ ಬೆಸ್ತರ ಹುಡುಗನಗೆ ಸೀಟು ಕೊಟ್ಟು ಬಿಟ್ಟರು. ಅವನು 20 ಸಾವಿರ ರೂಪಾಯಿಯೋ, ಎಷ್ಟೋ ಕಟ್ಟಬೇಕಾಗಿತ್ತು. ಆದರೆ ಅವನ ಹತ್ತಿರ ಒಂದು ಸಾವಿರ ರೂಪಾಯಿಗೂ ಗತಿಯಿಲ್ಲ. ಆಗ ನಾವು ಊರೆಲ್ಲ ಭಿಕ್ಷೆ ಎತ್ತಿ ಅವನಗೆ ದುಡ್ಡು ಕೊಟ್ಟು ಕಳುಹಿಸಿದೆವು. ಇಂಥ ಪುಣ್ಯಕ್ಕೆ ಈ ಸರ್ಕಾರ ಏಕಿರಬೇಕು? ಏಳೋ, ಎಂಟೋ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿವೆಯಲ್ಲ, ಅವುಗಳನ್ನೂ ಪ್ರೈವೇಟ್‌ನವರಿಗೇ ಕೊಟ್ಟುಬಿಡಿ. ಅವರು ಏನು ರೇಟ್ ಬೇಕೋ ಅಷ್ಟು fix ಮಾಡಿಕೊಳ್ಳಲಿ. ಯಾರ ಹತ್ತಿರ ಹಣವಿರುತ್ತದೋ ಅವರು ಹೋಗಿ ಸೇರಿಕೊಳ್ಳಲಿ. ಹಣವಿಲ್ಲದಿರುವವರನ್ನು ಗಾರೆ ಕೆಲಸಕ್ಕೆ, ಟೈಲರಿಂಗ್, ಚರಂಡಿ ತೊಳೆಯುವುದು ಇಂಥ ಕೆಲಸಗಳಿಗೆ ಹಾಕೋಣ. ಬಹುಶ: ನಿಮಗೆ ನೆನಪಿರಬಹುದು. ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಯಾಗಿದ್ದಾಗ, reservation introduce ಮಾಡಿದಾಗ, ಈ ದೇಶಕ್ಕೆ ಏನೋ ಅನಾಹುತವಾಗಿಬಿಡುತ್ತಿದೆ ಎಂದು 10–11 ವರ್ಷದ ಹುಡುಗರೆಲ್ಲ suicide ಮಾಡಿಕೊಂಡುಬಿಟ್ಟರು. ಅದರ movement ನಲ್ಲಿ ಮುಂದುಗಡೆಯೆಲ್ಲ ನಿಮ್ಮವರೇ ಇದ್ದರು. ಈಗ ಯಾರೂ ಹುಡುಗರು ಮೈಮೇಲೆ ಸೀಮೆಎಣ್ಣೆ ಹಾಕಿಕೊಂಡು ಸುಟ್ಟುಕೊಳ್ಳುವುದಿಲ್ಲವೇ? ಈಗ ಅವರು ಆನಂದದಿಂದ ಪಂಚಾಮೃತ ಕುಡಿಯುತ್ತಿದ್ದಾರೆಯೇ? ನಿಮಗೆ ನಾಚಿಕೆಯಾಗುವುದಿಲ್ಲವೇ? ಇವತ್ತು ಸಾಮಾನ್ಯ ಕನ್ನಡಿಗನಿಗೆ 1,20,000

ರೂಪಾಯಿಗಳನ್ನು ಕೊಟ್ಟು ಕಾಮೆಡ್‌ಗೆ ಹೋಗಿ B.E.ಗೆ ಸೇರುವಷ್ಟು ಶಕ್ತಿ ಬಂದಿದೆಯೇ? If an outsider who has sent in us as his representative accuses the whole House of conspiring against his interest. ಎಲ್ಲ political party ಗಳಲ್ಲೂ private engineering colleges ನಡೆಸತಕ್ಕಂಥವರಿದ್ದೀರಿ, ನೀವೆಲ್ಲರೂ ಲೂಟಿ ಹೊಡೆಯುವುದಕ್ಕೋಸ್ಕರ ನಮ್ಮ ಹಿತಕ್ಕೆ ಮಾರಕವಾಗಿ ನಡೆದುಕೊಂಡಿದ್ದೀರಿ ಎಂದು ಹೊರಗಡೆ ಜನರು ಹೇಳಿದರೆ ನಾವು ತಲೆ ಎತ್ತಿಕೊಂಡು ಬದುಕಬೇಕೇ? ಹೊರಗೆ ಹೋಗಿ ಮುಖ ತೋರಿಸಬೇಕೇ? Should we continue this? Right or wrong, ರಘುಪತಿಯವರು Education Minister ಆಗಿದ್ದಾಗ, private college ನಲ್ಲಿ ಸರ್ಕಾರಕ್ಕೆ ಸೀಟು ಇರಬೇಕೆಂದು first shout ಮಾಡಿದ್ದೂ ಆತನೇ. ಅಲ್ಲಿಯವರೆಗೂ ಅದರ ಪುಕಾರೇ ಇರಲಿಲ್ಲ. ಅಲ್ಲಿಂದ ಪ್ರಾರಂಭವಾಗಿದ್ದು, ಈ fee structure ಬಂತು. ಈ, tructureನ ದೆವ್ವ ಯಾವಾಗ ಪ್ರಾರಂಭವಾಯಿತೋ, that was taken advantage of and the interest of the private managements has been completely taken care of by the Government. What the judiciary has taken a decision? These are ever so many cases where the Legislature has asserted its supremacy. Whatever area they have found fault with us, let us rectify. We are an independent zone by all sense. We are soverign. We are not subordinate to the Judiciary. I am not trying to question their credentials. ನಮಗೆ ಜವಾಬ್ದಾರಿ ಇಲ್ಲವೇ? Don't we have a role? Don't we have responsibility? ತಾವು ಸಿಂಪಲ್‌ಆಗಿ continuation ಎಂದು ಹೇಳಿದಿರಿ. ತಾವು ಒಂದು ಕೆಲಸ ಮಾಡಿ. B.E.ಗೆ ಹತ್ತು ಲಕ್ಷ ರೂಪಾಯಿಗಳನ್ನು ಕಟ್ಟಬೇಕೆಂದು ಮಾಡಿಬಿಡಿ. ಯಾರೂ ಹೋಗುವುದೇ ಬೇಡ. ಯಾರ್‍ಯಾರು ಶ್ರೀಮಂತರಿರುತ್ತಾರೆ, ಪುಗಸಟ್ಟೆ ಲಂಚ ಹೊಡೆದಿರತಕ್ಕಂಥವರು, ಮಾನಗೆಟ್ಟ ದುಡ್ಡು ಹೊಡೆದಿತಕ್ಕಂಥವರು, ನಾಚಿಕೆ ಬಿಟ್ಟು ಬದುಕಿರತಕ್ಕಂಥವರ ಮಕ್ಕಳೆಲ್ಲಾ ಇಂಜಿನಿಯರುಗಳು, ಡಾಕ್ಟರುಗಳಾಗಲಿ. ನಮ್ಮ ಮಕ್ಕಳನ್ನೆಲ್ಲ ಕೂಲಿ ಹೊಡೆಯುವುದಕ್ಕೆ ಕಳಿಸೋಣ. ಕಾಮೆಡ್-ಕೆ ಎನ್ನುವುದನನ್ನು you must revise. Who is this? How did it come in to? ಏಕೆ ಇದಕ್ಕೆ ನೀವು ಮಾನ್ಯತೆ

ಕೊಡುತ್ತೀರಿ? ಅಥವಾ ಕಾಮೆಡ್-ಕೆನೂ ಇದ್ದುಕೊಳ್ಳಲಿ, ಇನ್ನೊಂದು ಕಾಮೆಡ್-ಕೆನೂ ಬಂದುಕೊಳ್ಳಲಿ, ನಮಗೇನೂ ತೊಂದರೆಯಿಲ್ಲ, Fee structure ಅನ್ನು reasonable ಆಗಿ ಮಾಡಿ. They don't deserve more than Rs.15.000 or Rs.20.000. ಹಿಂದಿನ ಸರ್ಕಾರವಿದ್ದಾಗ ಎಲ್ಲದಕ್ಕೂ ಅನುಮತಿಯನ್ನು ಒಂದೇ ಸಲಕ್ಕೆ ಕೊಟ್ಟುಬಿಟ್ಟರು. ಕೃಷ್ಣರವರು ಇದ್ದಾಗ 40-50 ಕಾಲೇಜುಗಳನ್ನು ಕೊಟ್ಟುಬಿಟ್ಟರು. ಇವತ್ತು ಮತ್ತೆ ನೀವು 50 ಕಾಲೇಜುಗಳನ್ನು ಕೊಡಿ. ಕಾರ್ ಗ್ಯಾರೇಜುಗಳಲ್ಲೆಲ್ಲಾ ಡೆಂಟಲ್ ಕಾಲೇಜುಗಳನ್ನು ಪ್ರಾರಂಭ ಮಾಡಿದರು. ಕುದುರೆ ಲಾಯದಲ್ಲಿ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡಿದರು. ವರ್ಕ್‌ಶಾಪ್‌ಗಳಲ್ಲಿ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡಿದರು. We should be ashamed. Do we deserve to be called the representatives of people? Do we reflect their aspirations here? ನೀವು Values ಬಗ್ಗೆ ಇಷ್ಟೆಲ್ಲಾ ಮಾತನಾಡತಕ್ಕಂಥವರು, sacrifice ಗೆ ನಾವು synonym ಎಂದು ಹೇಳಿಕೊಳ್ಳತಕ್ಕಂಥವರು, ದೇಶಭಕ್ತಿಗೆ ಜಹಗೀರು ಹಿಡಿದಿದ್ದೇವೆ ಎಂದೆಲ್ಲ ಮಾತನಾಡುತ್ತೀರಿ. Is this the way you conduct when an opportunity is thrown at your door? I am extremely sorry. Unless you take a decision to revise fee structure, unless you make it reasonable, unless you make this education accessible to the last man, I don't think you have proved your existence in office. You are like anyone else. Don't be like anyone else. ನೀವು ಇಷ್ಟು ವರ್ಷಗಳು ಮಾತನಾಡಿರತಕ್ಕಂಥಾದ್ದಕ್ಕೆ ನಿಮಗೇನಾದರೂ ಬದ್ಧತೆ ಇದೆ ಎಂದರೆ ಇದರಲ್ಲಿ ರುಜುವಾತು ಮಾಡಿ ತೋರಿಸಿ. ಇಲ್ಲದಿದ್ದರೆ, you don't desrve to stay in office.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಅಧ್ಯಕ್ಷರೆ, ಇದೊಂದು ಸೀಮಿತ ವ್ಯಾಪ್ತಿಯಲ್ಲಿ ಬಂದಿರುವ ಬಿಲ್ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಸನ್ಮಾನ್ಯ ಮಂತ್ರಿಗಳೆ, ನೀವು ಒಪ್ಪಂದ ಮಾಡಿಕೊಂಡ ಮೇಲೆ, ಕೇಸ್ ವಿತ್‌ಡ್ರಾ ಮಾಡಿ ಎಂದು ಅವರನ್ನು ಕೇಳಿಕೊಳ್ಳಬಹುದಾಗಿತ್ತು. ನೀವು ನೀವೆ ಒಪ್ಪಂದ ಮಾಡಿಕೊಂಡರೆ ಯಾವ ಕೋರ್ಟು ನಿಮಗೆ ಅಡ್ಡಿ

ಬರುವಂಥ ಪ್ರಶ್ನೆ ಇರಲಿಲ್ಲ. Litigation ಆಗಿ ಕೋರ್ಟ್ ಮುಂದೆ ನಾವು ಹೋದಾಗ ಏನು ವ್ಯಾಖ್ಯಾನವಾಗುತ್ತದೆ, ಅದನ್ನೆ binding ಎಂದು ಹೇಳಿ ಉಭಯತ್ರರು ಒಪ್ಪಿದ ಮೇಲೆ ಮಾಡಿಕೊಳ್ಳುವ ಅಗತ್ಯವಿರುವುದಿಲ್ಲ. 2,3,4,5, ವರ್ಷಗಳವರೆಗೆ ಈ ಪ್ರಾವಿಜನ್‌ನ್ನು ಅಡಾಪ್ಟ್ ಮಾಡಿಕೊಳ್ಳೋಣವೆಂದು ನೀವು ಅವರನ್ನು ಕೇಳಿ. Every year dilemma ದಲ್ಲಿರುವುದು ಮತ್ತೆ Every year ಆ ಸೀಟ್‌ಗಳನ್ನು ಉಳಿಸಿಕೊಳ್ಳುವುದಕ್ಕೆ ಆಗುತ್ತದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ನೀವು ಅವರ ಜೊತೆ ಚರ್ಚೆ ಮಾಡುವುದು ಮತ್ತೆ ನಿಮ್ಮ CET ಹುಡುಗರಿಗೆ ವಾಸ್ತವವಾಗಿ ಎಷ್ಟು ಸೀಟ್ ಇರುತ್ತದೆ ಎನ್ನತಕ್ಕಂಥದರ ಬಗ್ಗೆ ಕೂಡ ಗೊಂದಲ ಸೃಷ್ಠಿ ಮಾಡುವುದು ಮತ್ತೆ 2,3,4, round CET ನಡೆಸುವುದು ಮತ್ತೆ ಆ ಕಾಲೇಜಿನಲ್ಲಿ ಫೀ ಕಟ್ಟು ಎನ್ನುವುದು ಮತ್ತೆ ಅಲ್ಲಿಂದ ಇಲ್ಲಿಗೆ ಬರಬೇಕೆಂದು ಹೇಳುವುದು, ಮತ್ತೆ ಮೊದಲು ಇದ್ದಂಥ ಕಾಲೇಜಿನಲ್ಲಿ ಮೊದಲು ಕಟ್ಟಿರುವ ಫೀಯಲ್ಲಿ ಇಷ್ಟು ಮಾತ್ರ ಕೊಡುತ್ತೇವೆ ಉಳಿದಂಥ ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುವಂಥದು ಆಗುತ್ತಿವೆ. ಆದ್ದರಿಂದ, ಈ round ಗಳನ್ನು ದಯಮಾಡಿ ಸನ್ಮಾನ್ಯ ಶಿಕ್ಷಣ ಸಚಿವರು ಕಡಿಮೆ ಮಾಡಬೇಕು. ಒಂದು ಸಲ ಅಡ್ಮಿಷನ್ ಆದ ನಂತರ ಆತನಗೆ ಇನ್ನು ಒಳ್ಳೆಯ ಕಾಲೇಜು ಸಿಗುತ್ತದೆ. ಆಗ ಅಲ್ಲಿ ಬೇರೆ ಕಾಲೇಜಿಗೆ ಹೋಗಬೇಕೆಂಬ ಆಸೆ ಬರುತ್ತದೆ. ಆದರೆ, ಅಲ್ಲಿಂದ free ಯಾಗಿ T.C. and Marks card ತೆಗೆದುಕೊಂಡು ಬರುವುದಕ್ಕೆ ಆಗುವುದಿಲ್ಲ. ಮತ್ತೆ ಕಟ್ಟಿರುವ ಫೀಯನ್ನು ವಾಪಸ್ಸು ಕೊಡುವುದಿಲ್ಲ.

ಶ್ರೀ ಡಿ.ಹೆಚ್. ಶಂಕರಮೂರ್ತಿ:- ಮಾನ್ಯ ಮಾಧುಸ್ವಾಮಿಯವರು ಒಂದು ಪರ್ಟಿನೆಂಟ್ ಪಾಯಿಂಟ್‌ನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಉತ್ತರ ಹೇಳುವುದಕ್ಕೆ ಬಯಸುತ್ತೇನೆ. ಈ ವರ್ಷ ಮತ್ತು ಕಳೆದ ವರ್ಷ ಸಿಇಟಿ ಗೊಂದಲ ಯಾವುದೇ ರೀತಿಯಲ್ಲಿ ಇರಲಿಲ್ಲ. ಸಿಇಟಿಯ ಮೊದಲನೇ ರೌಂಡ್‌ನಲ್ಲಿ ಸೀಟ್ ಸಿಕ್ಕಿದ ಮೇಲೆ ಎರಡನೇ ರೌಂಡನ್ನು casual round ಎಂದು ಕರೆಯುತ್ತೇವೆ. ಉತ್ತಮ ಕಾಳೇಜುಗಳಿಗೆ ಸೀಟ್ ಸಿಕ್ಕಿದಾಗ ಅವರು ಹೋಗುವುದಕ್ಕೆ ಅವಕಾಶ ಇರುತ್ತದೆ. ಈ ರೀತಿಯಾಗಿ ಹೋಗುವಾಗ ಅವರು ಹಿಂದಿನ ಕಾಲೇಜಿನಲ್ಲಿ ಕಟ್ಟಿರುವಂಥ ಫೀನಲ್ಲಿ ಯಾವುದೇ ರೀತಿಯ

ಕಡಿತವಾಗುವುದಿಲ್ಲ. ಮೊದಲು ಕಟ್ಟಿದ್ದಂಥ ಹಣ ಆ ಕಾಲೇಜಿಗೆ ವರ್ಗಾವಣೆಯಾಗುತ್ತದೆ.

ಶ್ರೀ ಜಿ.ವಿ.ರಾಮರೆಡ್ಡಿ:– No. out of our experience, I am telling, it is not true.

ಶ್ರೀ ಡಿ.ಹೆಚ್.ಶಂಕರ ಮೂರ್ತಿ:– ಹಳೆಯ experience ಬಗ್ಗೆ ನನಗೆ ಗೊತ್ತಿಲ್ಲ. ಕಳೆದ ವರ್ಷ ಮತ್ತು ಈ ವರ್ಷಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತಿದ್ದೇನೆ. It is done by CET itself. ಆದ್ದರಿಂದ CET casual round ನಲ್ಲಿ ಅವರಿಗೆ ಬೇರೆ ಕಾಲೇಜಿಗೆ ಸೀಟ್ ಸಿಕ್ಕಿದರೆ ಯಾವುದೇ ರೀತಿಯ ವ್ಯತ್ಯಾಸವಾಗುವುದಿಲ್ಲ. ಇಂಜಿನಿಯರಿಂಗ್ ಸೀಟ್ ಸಿಕ್ಕಿದಂಥ ಹುಡುಗನಿಗೆ, ಆನಂತರ ಮೆಡಿಕಲ್‌ಗೆ ಸೀಟ್ ಸಿಕ್ಕಿದಾಗ ವ್ಯತ್ಯಾಸವಾಗುವುದಿಲ್ಲ. ಮತ್ತೆ ಡೆಂಟಲ್ ಸೀಟ್ ಸಿಕ್ಕಿರತಕ್ಕಂಥವರಿಗೆ ಮತ್ತೆ ಮೆಡಿಕಲ್‌ಗೆ ಸೀಟ್ ಸಿಕ್ಕಿದಾಗ ಹಣದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ತಾವು ಪ್ರಸ್ತಾಪ ಮಾಡಿರತಕ್ಕಂಥದಲ್ಲಿ ನಾನು ಅರ್ಥಮಾಡಿಕೊಂಡಿರತಕ್ಕಂಥ ವಿಷಯ ಏನೆಂದರೆ, ಯಾವುದಾದರೂ ಕಾರಣಕ್ಕೆ ಸಿಇಟಿಯಲ್ಲಿ ಸೀಟ್ ತೆಗೆದುಕೊಂಡಿರತಕ್ಕಂಥ ಹುಡುಗ ಅಲ್ಲಿ ಮೊದಲು ಅಡ್ಮಿಟ್ ಆಗಿ ನನಗೆ ಇಂಜಿನಿಯರಿಂಗ್ ಬೇಡ ನಾನು B.Sc. ಓದುತ್ತೇನೆಂದು ಬಿಟ್ಟು ಹೋದಾಗ ಮಾತ್ರ ಆ ಹುಡುಗ ಕೊಟ್ಟಂಥ ಹಣದಲ್ಲಿ ತೊಂದರೆಯಾಗುತ್ತದೆ. ಬಾಕಿ ಸಂದರ್ಭದಲ್ಲಿ ತೊಂದರೆಯಾಗುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಸನ್ಮಾನ್ಯ ಸಚಿವರೆ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ತಾವು ಹೇಳಿದ ಹಾಗೆ ಎರಡು ರೀತಿಯಲ್ಲಿಯೂ ಕೂಡ ಆಗುತ್ತಿದೆ. ಕಾಲೇಜು ಬಿಟ್ಟು ಬರುವಾಗ ಮೊದಲು ಒಂದು ವರ್ಷದ ಫೀಯನ್ನು ಕೇಳುತ್ತಿದ್ದರು. ತಾವು ಈ ಶಾಸನಗಳನ್ನು ಮತ್ತು ಅವರ ಜೊತೆ ಮಾತುಕತೆ ಮಾಡಿದ ಮೇಲೆ 10, 20% shell down ಮಾಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ನೀವು ತಿಳಿದುಕೊಂಡಿರುವುದು ತಪ್ಪು. ದಯವಿಟ್ಟು ನನಗೆ ಒಂದು specific instance ಕೊಡಿ. ಅದನ್ನು ನಾನು ಸರಿಮಾಡಿಕೊಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಈ ವಿಷಯ ಪತ್ರಿಕೆಗಳಲ್ಲಿ ಎರಡು–ಮೂರು ಸಲ ಬಂದಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಶಂಕರ ಮೂರ್ತಿಯವರೆ, ದಯವಿಟ್ಟು ನಾವು ಹೇಳುವುದನ್ನು ಒಂದು ನಿಮಿಷ ಕೇಳಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಸಿಇಟಿ ಮೂಲಕ ವರ್ಗಾವಣೆಯಾದರೆ ಹಣದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ಅವರಾಗಿ ಅವರು ಬದಲಾವಣೆ ಮಾಡಿಕೊಂಡರೆ ಮಾತ್ರ ವ್ಯತ್ಯಾಸವಾಗುತ್ತದೆ,

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಸಚಿವರೆ, ತಾವು ಕೊನೆಯಲ್ಲಿ ಒಟ್ಟಾಗಿ ಉತ್ತರ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಸಚಿವರೆ, ನಮಗೆ ಗೊತ್ತಿರುವ ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತೇವೆ. ತಾವು ಸರ್ಕಾರ ನಡೆಸುತ್ತಿದ್ದೀರಿ, ಆದ್ದರಿಂದ, ಅದು ಸರಿಯಿದ್ದರೆ ಬಿಟ್ಟುಬಿಡಿ, ಅದು ಸರಿಯಿಲ್ಲದಿದ್ದರೆ ಅದನ್ನು ಸರಿಪಡಿಸಬೇಕು. ಮುಂದಿನ ವರ್ಷಕ್ಕೆ ಸಿಇಟಿ ಇರುವುದಿಲ್ಲವೆಂದು ಬಹಳ ಕಡೆ ಮಕ್ಕಳು ಮಾತನಾಡಿಕೊಳ್ಳುತ್ತಿದ್ದಾರೆ. ಮುಂದಿನ ವರ್ಷ ಸಿಇಟಿ ಮಾಡುವುದಿಲ್ಲವೆಂದು ಸರ್ಕಾರ ನಿರ್ಧಾರ ತೆಗೆದುಕೊಂಡಿದೆಯೇ ಎಂದು ನಮಗೆ ಶಿವಮೊಗ್ಗ ಜಿಲ್ಲೆಯಲ್ಲಿ ಕೇಳಿರತಕ್ಕಂಥದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಈಗ ಕೆಲವು ಕಡೆ ಸಿಇಟಿ ಕ್ಲಾಸ್‌ಗಳನ್ನು ಪ್ರಾರಂಭ ಮಾಡಿಕೊಂಡಿದ್ದಾರೆ, ಇದರಿಂದ ಅವರಲ್ಲಿಯೇ ಗೊಂದಲ ಉಂಟಾಗಿದೆ. ಮುಂದಿನ ವರ್ಷದಿಂದ ಸಿಇಟಿ ಇರುವುದಿಲ್ಲವಂತೆ ಇದು ನಿಜವೇ ಎಂದು ನಮ್ಮನ್ನು ಕೇಳಿದಾಗ ಇದರ ಬಗ್ಗೆ ನಮಗೆ ಈವರೆಗೆ ಯಾವುದೇ ಮಾಹಿತಿಯಿಲ್ಲವೆಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಆದ್ದರಿಂದ, ಈ ಗೊಂದಲವನ್ನು ತಾವು ಮೊದಲು ನಿವಾರಣೆ ಮಾಡಬೇಕು. ಮತ್ತೆ ಕೆಲವು ಕಾಲೇಜಿನವರು ಸಿಇಟಿ ವ್ಯಾಪ್ತಿಯನ್ನು ಮೀರಿ ಕೂಡ ಸಿಇಟಿ ಹುಡುಗರಿಗೆ ಸೀಟ್ ಕೊಡುತ್ತೇವೆಂದು ನಿಮ್ಮ ಜೊತೆ ರಾಜಿಯಾಗಿದ್ದಾರೆ. ಅವರು ಯಾವ ಆಧಾರದ ಮೇಲೆ ಸೀಟ್ ಕೊಡುತ್ತಿದ್ದಾರೆಂಬುದನ್ನು ತಾವು ಹೇಳಬೇಕು. ಸನ್ಮಾನ್ಯ ಮಹದೇವಪ್ಪನವರು ಬಹಳ ಉದ್ವೇಗದಲ್ಲಿದ್ದರೆಂದು ಆ ವಿಷಯ

ಅಲ್ಲಿಗೆ ನಿಂತುಹೋಗಿತ್ತು. ಅದೇನೆಂದರೆ, ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಮೆರಿಟ್ ಸೆಲೆಕ್ಷನ್ ಮೇಲೆ ಸೀಟ್‌ಸಿಗುವಂಥ ಎಸ್‌ಸಿ/ಎಸ್‌ಟಿ ವರ್ಗದ ವಿದ್ಯಾರ್ಥಿಗಳ ಶುಲ್ಕವನ್ನು ನೀವು ಕಟ್ಟುವುದಕ್ಕೆ ಆಗದಿದ್ದರೆ ಸರ್ಕಾರಕ್ಕೆ ಏನು ಗೌರವ ಬರುತ್ತದೆ? Let him get a seat in CET or COMED-K. ಕನಿಷ್ಟ ಪಕ್ಷ ಅಲ್ಲಿ ಅವರ ಫೀಯನ್ನು ಕಟ್ಟುವುದಕ್ಕೆ ತಾವು ಏನಾದರೊಂದು ವ್ಯವಸ್ಥೆ ಮಾಡಬೇಕು. ನೀವು ಅಲ್ಲಿಗೆ 20–30 ಸೀಟ್ ಕೊಡುತ್ತೀರಿ. ಇದರಲ್ಲಿ 18,20% ಎಂದರೆ, 5–6 ಸೀಟ್‌ಗಳು ಮಾತ್ರ ಒಂದು ಕಾಲೇಜಿನಲ್ಲಿ ಸಿಗಬಹುದಷ್ಟೆ. ಆ ಮಕ್ಕಳಿಗೆ ತಾವು ಇವತ್ತಿನ ದಿವಸ ಏನಾದರೊಂದು ವ್ಯವಸ್ಥೆ ಮಾಡಬೇಕಲ್ಲವೇ? COMED-K ಯಲ್ಲಿ ಪರೀಕ್ಷೆ ಬರೆಯುತ್ತೇನೆ. ಅಲ್ಲಿ ಆತನಿಗೆ ಸೀಟ್ ಸಿಗುತ್ತದೆ. ಆದರೆ, ಆತನಿಗೆ ಅಲ್ಲಿ ಫೀ ಕಟ್ಟುವುದಕ್ಕೆ ಆಗುವುದಿಲ್ಲ. ಈ ವಿಷಯವನ್ನು ತಾವು ಬರೆದುಕೊಳ್ಳಿ. ನಮ್ಮ ಸಾಲ್‌ಕಟ್ ಕಾಲೋನಿಯಲ್ಲಿ ಒಬ್ಬ ಹುಡುಗನಿದ್ದಾನೆ, ಆತನಿಗೆ ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್‌ಗೆ ಸೀಟ್ ಸಿಕ್ಕಿದೆ, ಈತನದು ಕೊನೆಯ ಸೀಟ್ ಆಗಿರುವುದರಿಂದ ಈತನ ಹಿಂದೆ ಇರತಕ್ಕಂಥವನು ಬಂದು ನಿನಗೆ 1 ಲಕ್ಷ ರೂಪಾಯಿ ಕೊಡುತ್ತೇನೆ, ನೀನು ಆ ಸೀಟನ್ನು ನನಗೆ ಬಿಟ್ಟುಕೊಡೆಂದು ಕೇಳಿದ್ದಾನೆ. ಆತನಿಗೆ ಫೀ ಕಟ್ಟುವುದಕ್ಕೆ ಹಣ ಇಲ್ಲ. ಈ ರೀತಿಯಾದ ದಂಧೆಗೆ ತಾವು ಏನು ಮಾಡುತ್ತೀರಿ? ನೀವು ವಿತ್‌ಡ್ರಾ ಮಾಡುವವರನ್ನು ಕೇಳಬೇಕು. ಇದರ ಬಗ್ಗೆ ಒಂದು ಗೊಂದಲ ಇದೆ. ಪರೀಕ್ಷೆಯನ್ನೇ ವಿತ್‌ಡ್ರಾ ಮಾಡಿಕೊಳ್ಳತಕ್ಕಂಥ ಕೆಲಸ ನಡೆಯುತ್ತಿದೆ. ಮುಂದಿನ ಪರೀಕ್ಷೆಯಲ್ಲಿ ಮತ್ತೆ ತೆಗೆದುಕೊಳ್ಳಬಹುದೆಂದು ಮೆರಿಟ್ ತೆಗೆದುಕೊಂಡಿರತಕ್ಕಂಥವರು 3,4 ಲಕ್ಷ ರೂಪಾಯಿಗೆ ಮೆಡಿಕಲ್ ಸೀಟ್‌ಗಳನ್ನು ಬ್ರಿಲಿಯೆಂಟ್ ಹುಡುಗರು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. 20 ರಿಂದ 25 ಲಕ್ಷ ರೂಪಾಯಿವರೆಗೆ ಈ ಜಾಲ ಹೋಗಿತ್ತು. ಸಿಇಟಿ ಪರೀಕ್ಷೆ ಬರೆದವನು PUC ನಲ್ಲಿ ವಿತ್‌ಡ್ರಾ ಮಾಡಿಕೊಂಡು, ಆ ಸೀಟನ್ನು ಹಿಂದೆ ಇರತಕ್ಕಂಥವನಗೆ ಬಿಟ್ಟುಕೊಟ್ಟರೆ ಈತನಿಗೆ ದುಡ್ಡು ಕೊಡುತ್ತಾರೆ. ನನಗೆ ಹೇಗಿದ್ದರೂ ಗೊತ್ತಿದೆ ಮುಂದಿನ ವರ್ಷ ಸಿಇಟಿ ಬರೆಯುತ್ತೇನೆಂದು ಹಣ ಪಡೆದುಕೊಂಡು ಈ ಹಣದಿಂದ ಮುಂದಕ್ಕೆ ಓದಬಹುದೆಂದು ಆ ಹುಡುಗ ಟ್ರೈ ಮಾಡುತ್ತಾನೆ. ಇಂಜಿನಿಯರಿಂಗ್ ಸೀಟ್ ಖಂಡಿತವಾಗಿ ಇವತ್ತಿನ ದಿವಸ ನ್ಯಾಷನಲ್ ಲೆವೆಲ್‌ನ...

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇಲ್ಲಿ ಏನಾಗಿದೆಂದರೆ, ಇಂಜಿನಿಯರಿಂಗ್, ಮೆಡಿಕಲ್, ಡೆಂಟಲ್‌ಗೆ ಸಿಇಟಿ ಪರೀಕ್ಷೆಯನ್ನು ಬರೆಯುತ್ತಾನೆ. ಪರೀಕ್ಷೆ ಬರೆದ ಮೇಲೆ ಆತ ಯಾವುದಾದರೊಂದನ್ನು ಅಂದರೆ, ಇಂಜಿನಿಯರಿಂಗ್ ಆಯ್ಕೆ ಮಾಡಿಕೊಂಡು ಮೆಡಿಕಲ್ ಸೀಟ್‌ನ್ನು ಮಾರಾಟ ಮಾಡಿಬಿಡುತ್ತಾನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- ಆ ರೀತಿಯಲ್ಲ. ಕೆಲವರು ಆ ರೀತಿಯಾಗಿ ಮಾಡುವುದಕ್ಕೆ ಆಗದೆ ಇದ್ದರೆ, ಪಿಯುಸಿಯನ್ನೆ ವಿತ್‌ಡ್ರಾ ಮಾಡಿಕೊಳ್ಳುತ್ತಾರೆ. ಪಿಯುಸಿಯನ್ನು ವಿತ್‌ಡ್ರಾ ಮಾಡಿಕೊಂಡರೆ, ಆಟೊಮ್ಯಾಟಿಕ್ ಆಗಿ ಸಿಇಟಿ Entrance ನಲ್ಲಿ ಹೊರಟು ಹೋಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ತಾವು ಎಲ್ಲಿಯಾದರೂ ಒಂದು ನಿರ್ಬಂಧವನ್ನು ಮಾಡಬೇಕು. ಒಂದು ಕಡೆ ಮನುಷ್ಯತ್ವ, ಮತ್ತೊಂದು ಕಡೆ ಶಿಸ್ತು ಇರಬೇಕಲ್ಲವೇ? ಹುಡುಗ ಮೊದಲನೇ Attempt ನಲ್ಲಿ ಪಾಸ್ ಮಾಡಿ ಮೆರಿಟ್ ತೆಗೆದುಕೊಂಡು, ಒಂದು ತಿಂಗಳಲ್ಲಿ ಪರೀಕ್ಷೆ ತೆಗೆದುಕೊಂಡ ಇನ್ನೊಬ್ಬನಿಗೆ ಸೀಟ್ ಸಿಗುತ್ತದೆ. ಆತ ಫೇಲ್ ಆಗಿರುತ್ತಾನೆ, ಮತ್ತೆ ಒಂದು ತಿಂಗಳಲ್ಲಿ ಪರೀಕ್ಷೆ ಬರೆಯುತ್ತಾನೆ. ಆನಂತರ ಆತ ಕೂಡ ಈ ಪೂಲ್‌ಗೆ ಬರುತ್ತಾನೆ. ಮೊದಲನೇ ಪರೀಕ್ಷೆಯಲ್ಲಿ ಆತ ಏಕೆ ಫೇಲ್ ಆದ? ಇದನ್ನು ಇವರು ಹೇಳಬೇಕಲ್ಲವೇ? ಸಿಇಟಿ ಪರೀಕ್ಷೆ ಬರೆಯುತ್ತಾನೆ. they will wait for him. Casual round ಎಂದು ಸನ್ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದರ ಬಗ್ಗೆ ಹೇಳುವುದಾದರೆ, Casual round ನಲ್ಲಿ ಸಪ್ಲಿಮೆಂಟರಿ ಪರೀಕ್ಷೆ ಬರೆಯತಕ್ಕಂಥವರು ಕೂಡ ಬಂದು ಸೇರುತ್ತಿದ್ದಾರೆ. ಸಪ್ಲಿಮೆಂಟರಿ ಬರೆದು ಬಂದಿರುವ ಮಕ್ಕಳಿಗೆ ಸೀಟು ಕೊಡತಕ್ಕಂಥದ್ದು ನಿಮ್ಮ ಮ್ಯಾನೇಜ್‌ಮೆಂಟ್‌ನಲ್ಲಿದೆ. First attempt pass ಆದ ಹುಡುಗ ಮನೆಯಲ್ಲಿ ಕುಳಿತಿರುತ್ತಾನೆ ಅಥವಾ B.A., or B.Sc. ಡಿಗ್ರಿಗೆ ಹೋಗುತ್ತಾನೆ. ಫೇಲ್ ಆದ ಹುಡುಗ next ಬರುತ್ತಾನೆ. ಅಥವಾ ವಿತ್‌ಡ್ರಾ ಮಾಡಿದ ಹುಡುಗ next ಬರುತ್ತಿದ್ದಾನೆ. ಆದ್ದರಿಂದ, ಇಂಜಿನಿಯರಿಂಗ್, ಮೆಡಿಕಲ್ ಕೋರ್ಸ್‌ಗಳಿಗೆ ಎಲ್ಲಿಯಾದರೊಂದು ನಿರ್ಬಂಧವನ್ನು ತಾವು ಹಾಕಬೇಕು. ನಾವು improvement ತೆಗೆದುಕೊಳ್ಳುತ್ತೇನೆಂದರೆ, I have to be punished for at least one year.

ಒಂದು ವರ್ಷ ಮನೆಯಲ್ಲಿ ಕುಳಿತುಕೊಳ್ಳಿ ಎಂದು ತಾವು ಹೇಳಬೇಕು. ಒಂದು ತಿಂಗಳಲ್ಲಿ ಪರೀಕ್ಷೆ ಇಟ್ಟು ಮೆರಿಟ್ ಹೊಂದಿರುವ ಹುಡುಗನ ಮೇಲೆ ಇನ್ನೊಬ್ಬ ಹುಡುಗನ ತರುವ ಸ್ಥಿತಿಯನ್ನು ಏಕೆ ನಿರ್ಮಾಣ ಮಾಡಿದ್ದೀರೆಂದು ನನಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಎಲ್ಲಿಯಾದರೂ ಒಂದು ನಿಯಮವನ್ನು ಅಳವಡಿಸಬೇಕು. ನೀವು ಮೈನಾರಿಟಿ ಇನ್‌ಸ್ಟಿಟ್ಯೂಷನ್‌ಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇವತ್ತು ಈ ಕಾನೂನು ಎಕ್ಸಟೆಂಡ್ ಮಾಡುತ್ತೀದ್ದೀರಿ. ಇದಕ್ಕೆ ನಮ್ಮ ತಕರಾರು ಏನಿಲ್ಲ. ನೀವೇ ಒಡಂಬಡಿಕೆ ಮಾಡಿಕೊಂಡು ಮೇಲೆ ನಾವೇಕೆ ತಕರಾರು ಮಾಡಬೇಕು? But long term ಬಗ್ಗೆ ಏನಾದರೊಂದು ವ್ಯವಸ್ಥೆ ಮಾಡಿ. Every year you cannot wait for the assembly to pass the bill and see that students are admitted into the courses. How can they be? ಪ್ರತಿಸಲ ನಿಮ್ಮ ಬಿಲ್ ಪಾಸಾಗಲೆಂದು ಕಾಯುವುದಕ್ಕೆ ಆಗುತ್ತದೆಯೇ? ಆದ್ದರಿಂದ, ಒಂದು long termಗೆ ಏನಾದರೊಂದು ಪ್ರಾವಿಜನ್ ಮಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ, ತಾವು ಅನೇಕ ಸಾಮಾಜಿಕ ಚಳುವಳಿಯಲ್ಲಿ ಹೋರಾಟ ಮಾಡಿದ್ದಿರಿ. ಮತ್ತೆ ನಿಮ್ಮದೇ ಆದಂಥ ತತ್ವ ಸಿದ್ಧಾಂತಗಳ ಬಗ್ಗೆ ಹೋರಾಟ ಮಾಡಿದ್ದೀರಿ. ಮತ್ತೆ ವಿದ್ಯಾರ್ಥಿ ಸಂಸ್ಥೆಗಳನ್ನು ಕಟ್ಟಿಕೊಂಡು ಹೋರಾಟ ಮಾಡಿದ್ದೀರಿ. ಅನೇಕ ಸಾರಿ ಹಿಂದೆಯೂ ಕೂಡ ಈ ಮಾತನ್ನು ಹೇಳಿದ್ದೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಎನ್ನುವ ನಮ್ಮದೇ ಆದಂಥ ಸಂಸ್ಥೆ ಇದೆ. ಸಾಮಾನ್ಯ ಮತ್ತು ಗ್ರಾಮೀಣ ಪ್ರದೇಶ ಮಕ್ಕಳಿಗೆ, ಬಡವರಿಗೆ, ಹಿಂದುಳಿದ ವರ್ಗದವರಿಗೆ ಮೆಡಿಕಲ್, ಇಂಜಿನಯರಿಂಗ್ ಕಾಲೇಜುಗಳಲ್ಲಿ ಪ್ರಾಮಾಣಿಕವಾಗಿ ಸೀಟ್ ಸಿಗುತ್ತಿಲ್ಲ. ಯಾರು ಶ್ರೀಮಂತರಿದ್ದಾರೆ, ಯಾರು ದರೋಡೆ ಮಾಡಿ ಹಣವನ್ನು ಇಟ್ಟಿದ್ದಾರೆ, ಯಾರು ಕಪ್ಪು ಹಣವನ್ನು ಇಟ್ಟಿದ್ದಾರೆಯೋ ಅಂಥವರಿಗೆ ಮಾತ್ರ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜು ಎನ್ನುವ ಪದ್ಧತಿ ಈಗ ಆಗಿದೆ. ಇದರ ಜೊತೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸತಕ್ಕಂಥವರ ಹಿನ್ನೆಲೆ ಏನು ಎಂಬುದರ ಬಗ್ಗೆ ಮತ್ತು ಯಾರು ನಡೆಸುತ್ತಿದ್ದಾರೆ ಎಂದು ಮತ್ತು ಅಲ್ಲಿನ ಪರಿಸ್ಥಿತಿ ಏನೆಂಬುದರ ಬಗ್ಗೆ

ತಾವು ಎಲ್ಲಿಯಾದರು ನೋಡಿದ್ದೀರಾ? ಶಿಕ್ಷಣ ಸಂಸ್ಥೆ ನಡೆಸತಕ್ಕಂಥವರ ಹಿನ್ನೆಲೆ, ಬದ್ಧತೆ, ತತ್ವ ಸಿದ್ಧಾಂತಗಳು ಏನಿವೆ ಎಂಬುದನ್ನು ನೋಡಬೇಕಲ್ಲವೆ? ಇವತ್ತಿನ ದಿವಸ ಬಡವನಿಗೆ ಅನುಕೂಲವಾಗುತಿಲ್ಲ. ನಿಮ್ಮ ಸಮ್ಮಿಶ್ರ ಸರ್ಕಾರ ಅನೇಕ ವಿಚಾರದಲ್ಲಿ ದಿಟ್ಟ ನಿಲುವುಗಳನ್ನು ತೆಗೆದುಕೊಂಡಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಿ, ಒಂದು ಹೊಸದಾದ ಆದರ್ಶ ದಿಕ್ಕಿನಲ್ಲಿ ಹೋಗತಕ್ಕಂಥದ್ದರ ಬಗ್ಗೆ ಚಿಂತನೆ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲಿದಿದ್ದರೆ ಈ ರೀತಿಯಾದ ಮಸೂದೆಗಳನ್ನು ತರುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಇದರಿಂದ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮತ್ತು ಸಾಮಾನ್ಯ ವಿದ್ಯಾರ್ಥಿಗಳಿಗೆ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದಿಲ್ಲ. ಏನಿದ್ದರೂ ಹಣವಂತವರಿಗೆ, ಕಪ್ಪು ಹಣ ಇಟ್ಟಿರತಕ್ಕಂಥವರಿಗೆ ಮತ್ತು ಪಾಳೇಗಾರತನ ಮಾಡತಕ್ಕಂಥ ಜನರಿಗೆ ಮಾತ್ರ ಇದರಿಂದ ಅನುಕೂಲವಾಗುತ್ತದೆ. ಇವತ್ತಿನ ದಿವಸ ಶಿಕ್ಷಣ ಸಂಸ್ಥೆಗಳನ್ನು ನಡೆಸತಕ್ಕಂಥವರಲ್ಲಿ 100ಕ್ಕೆ 90 ಭಾಗ ಈ ರೀತಿಯಾದ ಪಾಳೇಗಾರತನವನ್ನು ಮಾಡುತ್ತಿದ್ದಾರೆ. ಇದಕ್ಕೆ ನೀವು ಬೆಲೆ ಕೊಡುವುದಾದರೆ, ನಾಳೇ ದಿವಸ ನಮ್ಮ ರಾಜ್ಯದಲ್ಲಿ ಸಾಮನ್ಯ ಜನರಿಗೆ ಶಿಕ್ಷಣ ಅತ್ಯಂತ ದುರ್ಲಭವಾಗುತ್ತದೆಂಬ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ನೀವು ಒಂದು ವರ್ಷಕ್ಕೆ extend ಮಾಡಿ ಎಂದು ಹೇಳಿದ್ದೀರಿ ಅದರ ಬಗ್ಗೆ ತಕರಾರು ಮಾಡುವಂತಹ ವಿಚಾರವಲ್ಲ. ಒಂದು ಬಾರಿ ಸ್ಪಷ್ಟವಾಗಿ ಈ ಬಗ್ಗೆ ವಿವರಣೆಯನ್ನು ಕೊಡಬೇಕು. ಪಿ.ಎ.ಇನಾಂದಾರ್ ಮತ್ತು ಇತರರು ವಿರುದ್ಧ ಮಹಾರಾಷ್ಟ್ರ ರಾಜ್ಯ– ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಉಪಬಂದಿಸಲಾದಂಥ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ ಎಂದು ಹೇಳಿದ್ದೀರಿ. Is it not the duty of the Government to explain it? What is that? why you are going to do it and what for you are going to do it?Is it not the responsibility of the government to explain it? you didn't explain it. What is that P.A.Inamdar's case and how it will apply to Karnataka because it has applied to Maharastra Government?

ಅದರ ಬಗ್ಗೆ ತಾವು explain ಮಾಡಿಲ್ಲ ಅದು ಒಂದು. ಇನ್ನು ಎರಡನೆಯದಾಗಿ ಹೇಳುವುದಾದರೆ, ಎಷ್ಟು ದಿವಸ ನೀವು adhoc arrangement ಮಾಡಿಕೊಳ್ಳುತ್ತೀರಿ? ನಿಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ. ನೀವು ಹಿರಿಯರಾಗಿದ್ದೀರಿ, ಇದನ್ನು ಮಾಡಿಕೊಂಡು ನೀವು ಈ ವ್ಯವಹಾರಗಳನ್ನು ನಡೆಸುವುದಕ್ಕೆ ಕೆಲಸವನ್ನು ಮಾಡುತ್ತೀರಿ, ಬಡ ವಿದ್ಯಾರ್ಥಿಗಳನ್ನು ನಾಶ ಮಾಡತಕ್ಕಂತಹದ್ದಕ್ಕೆ ನೀವು ಟೈಮ್‌ನ್ನು extend ಮಾಡಿದಂತಾಗುತ್ತದೆ. ಅಂದರೆ ನೇಣಿಗೆ ಹಾಕುವುದನ್ನು ತಪ್ಪಿಸಿ ಬಿಟ್ಟು ನೇಣುಗಂಬಕ್ಕೆ ಹಾಕುವುದಕ್ಕೆ ಅವನನ್ನು ಸಾಯಿಸುವುದಕ್ಕೆ, ಇದನ್ನು ಬಿಟ್ಟು ಒಂದೇ ಸಾರಿ ನೇಣಿಗೆ ಹಾಕಿಬಿಡಿ ಅವನು ಸತ್ತು ಹೋಗಿಬಿಡುತ್ತಾನೆ. ದಿನ ಏತಕ್ಕಾಗಿ ಅವನನ್ನು ಸಾಯಿಸುತ್ತೀರಿ? ದಿನವೂ ಸಾಯಿಸುವುದರಿಂದ ಏನು ಪ್ರಯೋಜನವಿಲ್ಲ. ಇವತ್ತು fee structure ಬಗ್ಗೆ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿರುವುದು ಸತ್ಯ. Fee ಕಟ್ಟುವುದಕ್ಕೆ ಸಾಧ್ಯವಿಲ್ಲದೇ CET ಯಲ್ಲಿ ಸೀಟು ಸಿಕ್ಕಿದರೂ ಕೂಡ ಅವನು ಇವತ್ತು ordinary collegeಗೆ ಹೋಗುತ್ತಿದ್ದಾನೆ. Are you not feeling that COMED-K is running parallel to the Government? ಇದರ ಬಗ್ಗೆ ನಮಗೆಲ್ಲರಿಗೂ ಕೂಡ ಅರ್ಥವಾಗಬೇಕಾಗಿದೆ. ಇದರ ಬಗ್ಗೆ ಸದನಕ್ಕೂ ಕೂಡ ಅರ್ಥವಾಗಬೇಕು. Are we not feeling that COMED-K is like a parallel Government? ಇದರ ಬಗ್ಗೆ ಮಾನ್ಯ ಸಚಿವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಹೇಳಬೇಕು. ಸರ್ಕಾರಕ್ಕೆ ಪ್ರತಿ ಸರ್ಕಾರವೆನ್ನುವಂತಹ ರೀತಿಯಲ್ಲಿ ಏನು ಅನ್ನಿಸುತ್ತಿಲ್ಲವೇ ನಿಮಗೆ? ಅವರದೇ ಒಂದು ಕಾನೂನು, ಅವರದೇ ಒಂದು ನಿಯಮ, ನಮಗೆ ಯಾರಿಗೂ ಏನು ಅನಿಸುತ್ತಿಲ್ಲವೇ? Are they running this as a parallel Government? ಇವತ್ತು ಬಡವರಿಗೆ ಶಿಕ್ಷಣ ಇಲ್ಲದಂತೆ ತಪ್ಪಿಸುವುದಕ್ಕೆ ಏನೆಲ್ಲಾ ವ್ಯವಸ್ಥೆಯಾಗಬೇಕಾಗಿದೆಯೋ ಅದೆಲ್ಲವೂ ಆಗಿದೆ. ದಯವಿಟ್ಟು ನಿಮ್ಮ ಕಾಲದಲ್ಲಿಯಾದರೂ ಕೂಡ ಇದನ್ನು ಮಾಡಿಕೊಡುವ ಬಗ್ಗೆ ಅವಕಾಶವನ್ನು ಮಾಡಿಕೊಡಬೇಡಿ. ಈ ad hoc arrangementನ್ನು ಇಷ್ಟು ದಿವಸ ನೀವು ನಡೆಸುವುದು ಸರಿಯಲ್ಲ. ಈ ವರ್ಷಕ್ಕೆ ಏನು ಕೊಡುತ್ತೀರಿ, ಮುಂದಿನ ವರ್ಷಕ್ಕೆ ಏನು ಮಾಡುತ್ತೀರಿ? How are you going to solve it permanently? ಅದರ ಬ್ಗಗೆ ಮಾಹಿತಿ ಇರಬೇಕಲ್ಲವೇ? ಹೋದ ವರ್ಷ

ಒಂದು ವರ್ಷಕ್ಕೆ ಎಂದು ತೆಗೆದುಕೊಂಡಿದ್ದೀರಿ, ನೀವು ಮತ್ತೆ ಒಂದು ವರ್ಷಕ್ಕೆ extend ಮಾಡಿ ಎಂದು ಕೇಳುತ್ತಿದ್ದೀರಿ. ಮಕ್ಕಳ ಹಿತದೃಷ್ಟಿಯಿಂದ ಕೊಡೋಣ. How long? What is your long term plan for it? ಏನು ಇದೆ ನಿಮ್ಮ ಹತ್ತಿರ. ದಯವಿಟ್ಟು, ಈ ರಾಜ್ಯದ ಮಕ್ಕಳನ್ನು ಉಳಿಸಿ, ಬಡಮಕ್ಕಳನ್ನು ಉಳಿಸಿ, ಶಿಕ್ಷಣ ಹಿಂದೆ ಇದ್ದ ಹಾಗೆ ಶ್ರೀಮಂತರಿಗೆ ಅಂತ ಹೇಳಿ ಹಿಂದೆ ಇದ್ದ ಪದ್ಧತಿಯನ್ನು ಜಾರಿಗೆ ದಯವಿಟ್ಟು ತರಬೇಡಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, Fee ಯನ್ನು ವಾಪಸ್ಸು ಕೊಡುತ್ತಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು ಹೇಳಿದರು. ಇದರ ಬಗ್ಗೆ ಪತ್ರಿಕೆಯ ಕಟಿಂಗ್ಸ್‌ನ್ನು ನಾನು ತಮಗೆ ತಂದುಕೊಡುತ್ತೇನೆ. ಏಕೆಂದರೆ ಇಷ್ಟರಲ್ಲಿ ತಮಗೆ ಮಾಹಿತಿಯೂ ಬರಬೇಕಾಗಿತ್ತು. ಅದು ಏತಕ್ಕಾಗಿ ಬಂದಿಲ್ಲವೆಂದು ಸರ್ಕಾರಕ್ಕೆ ಗೊತ್ತಿಲ್ಲ. ಸಂಪೂರ್ಣ fee ಯನ್ನು ವಾಪಸ್ಸು ಕೊಡುತ್ತಿಲ್ಲವೆಂದು ಪತ್ರಿಕೆಯಲ್ಲಿ ದಿನನತ್ಯ ನಾನು 2–3 ದಿವಸಗಳ ಕಾಲ ಓದಿದ್ದೇನೆ. ಅದರ ಬಗ್ಗೆ ಕಟಿಂಗ್ಸ್‌ನ್ನು ನಾನು ತಂದುಕೊಡುತ್ತೇನೆ, ತಾವು ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. 2003–04 ರಲ್ಲಿ ಈ fee structure fix ಮಾಡದೇ ಇದ್ದುದ್ದರಿಂದ ಆ ಬ್ಯಾಚ್‌ಗೆ ಇವತ್ತಿನವರೆಗೂ backward classes ಮತ್ತು SC/ST ಯವರಿಗೆ full fee ಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನೀವು ಸರಿಪಡಿಸಲಿಲ್ಲ. ಅವರ ಬೇಡಿಕೆಯನ್ನು ಇಷ್ಟರವರೆಗೂ ಕೂಡ ಸರಿಮಾಡುವುದಕ್ಕೆ ಪ್ರಯತ್ನವನ್ನು ಮಾಡಲಿಲ್ಲ. ಅದು ಏಕೆಂದು ಗೊತ್ತಿಲ್ಲ.ದಯವಿಟ್ಟು ಅದರ ಬ್ಗಗೆ ತಮ್ಮ ಪಕ್ಷದವರೇ ತಮ್ಮ ಹತ್ತಿರ ಒಂದು ಬೇಡಿಕೆಯನ್ನು ಇಟ್ಟಿದ್ದಾರೆ. ಅದನ್ನು ತಾವು ಸರಿಮಾಡಬೇಕು. ನೇರವಾಗಿ ಈ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ ಇದರ ಬ್ಗಗೆ ಮಾನ್ಯ ರಮೇಶ್‌ಕುಮಾರ್‌ರವರಿಗೆ ಗೊತ್ತಿದೆ. Social Welfare Department ನಿಂದ ಏನು ನೇರವಾಗಿ student ಗಳಿಗೆ CET ಮತ್ತು COMED-K ಬಗ್ಗೆ ಕಟ್ಟುವಂತಹದ್ದನ್ನು first students ಕಟ್ಟಬೇಕು, ಆಮೇಲೆ ಸರ್ಕಾರದಿಂದ ತೆಗೆದುಕೊಳ್ಳುವಂತಹ ಪದ್ಧತಿ ಇರಬಾರದು. The government should directly send it to CET or COMED-K, whatever it is. ಕಾಲೇಜುಗಳಿಗೆ ಕಳುಹಿಸುವಂತಹ ವ್ಯವಸ್ಥೆಯಾಗಬೇಕು. ಆದರೆ ನಿಮಗೆ ಗೊತ್ತಿದೆ, ಎಷ್ಟು ಸೀಟುಗಳು

ಹೋಗುತ್ತಿದೆ, ಅಷ್ಟು ದುಡ್ಡನ್ನು ಕಟ್ಟಿಬಿಡಿ. ಅದನ್ನು ಬಿಟ್ಟು ವಿದ್ಯಾರ್ಥಿಗಳು first ಕಟ್ಟುವಂತಹದ್ದು, ನಂತರ ಸರ್ಕಾರ ಅವರಿಗೆ ಕೊಡುವಂತಹದ್ದು ಇದಕ್ಕಾಗಿ ಅವರು ವರ್ಷಗಟ್ಟಲೆ ಕಾಯಬೇಕು. ಅವನಗೆ ಅಷ್ಟು ಹಣವನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕಾದರೆ ಪುನಃ ಸಾಲವನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ.ಆರ್.ರಮೇಶ್‌ಕುಮಾರ್(ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ಇವತ್ತೆ ತಾವು ಕೋಲಾರ ಎಸ್‌ಪಿಯವರನ್ನು contact ಮಾಡಿ information ನ್ನು ತೆಗೆದುಕೊಳ್ಳಿ. ನಕ್ಕಲಗಡ್ಡ ಎಂಬ ಊರು, ಅಲ್ಲಿ scheduled caste ಹುಡುಗ, ಆ ಹುಡುಗನಿಗೆ Maxmuller college ನಲ್ಲಿ medical seatನ್ನು ಕೊಟ್ಟರು. ಈ ದುಡ್ಡು adjust ಮಾಡಲು ಅವನಿಗೆ ಆಗಲಿಲ್ಲ. ಅವನ ತಾಯಿ ತಂದೆ ಇಬ್ಬರು ಬೆಳಗ್ಗೆಯಿಂದ ರಾತ್ರಿಯವರೆಗೆ ಕೂಲಿ ಮಾಡಿ ಬರುವವರು. ಕೂಲಿಬಿಟ್ಟು ಅವರಿಗೆ ಬೇರೆ ಏನೂ ಗತಿ ಇಲ್ಲ. ಸರಿ ನಾನು ಅಲ್ಲಿ ಇಲ್ಲಿ ದುಡ್ಡು adjust ಮಾಡಿಕೊಟ್ಟಿದ್ದೆ. ಹೋದ ಸಾರಿ ನನಗೆ ಸ್ವಲ್ಪ ತೊಂದರೆಯಾಯಿತು. ನಾನು ಈ ದುಡ್ಡನ್ನು adjust ಮಾಡುವುದಕ್ಕಾಗಲಿಲ್ಲ. ಅವನು ಏನು ಮಾಡಿದ ಅಂದರೆ ಯಾರೋ ಒಬ್ಬರು ಅವರ ನೆಂಟರ ಹತ್ತಿರ ಮಾತನಾಡಿಕೊಂಡು ಟ್ರಾಕ್ಟರ್ ಮೇಲೆ ಸ್ವಲ್ಪ ಹಣವನ್ನು ತೆಗೆದುಕೊಂಡ, ಆ ಟ್ರಾಕ್ಟರ್ ಬಾಡಿಗೆ ಹೋದರೆ ಹಣ ಬರುತ್ತದೆ ಎಂದುಕೊಂಡ. ಇವನು ಅವನಗೆ ಪೂರ್ತಿ ಹಣ ಕೊಡಲಿಲ್ಲ. ಆ ಟ್ರಾಕ್ಟರ್‌ನವನು ಏನು ಮಾಡಿದ ಅಂದರೆ ಬುದ್ಧಿವಂತ, ಅವನು ಬೇರೆಯವರ ಹತ್ತಿರ 29 (A) ಫಾರಂಗೆ ಸೈನ್ ಹಾಕಿಸಿ ಇವನ ಕೈಗೆ ಕೊಟ್ಟುಬಿಟ್ಟ. ಅವನು ಹಾಕಿಕೊಡಲಿಲ್ಲ. ಅದನ್ನು ಮಾಡಿಬಿಟ್ಟು ಅವನನ್ನು Blackmail ಮಾಡುವುದಕ್ಕೆ ಶುರುಮಾಡಿದ. ಆಮೇಲೆ ಈ ಬಗ್ಗೆ ಪೊಲೀಸರಿಗೆ ಕಂಪ್ಲೈಂಟ್ ಕೊಟ್ಟ, ಅವನಿಗೆ ಈಗ ಬೇಲ್ ಆಗಿ 5 ದಿವಸಗಳು ಆಯಿತು. ಆ ಹುಡುಗ ಗೊಳೋ ಎಂದು ಅಳುತ್ತಾನೆ. Management ನವರು ಏನು ಮಾಡುತ್ತಾರೆ ಗೊತ್ತಾ classroomಗೆ ಬಂದು ಏಕೋ Fee ಕಟ್ಟಲಿಲ್ಲ ಎಂಬುದು ಕೇಳಿದರಂತೆ. ಇವನು scheduled caste ಹುಡುಗ ಎಂದು ಅಲ್ಲಿರುವವರೆಲ್ಲರಿಗೂ ಗೊತ್ತಾಗಬೇಕು. ಇವನಿಗೆ Social Welfare Department ನಿಂದ ಹಣ ಬರಬೇಕು. ಅದು ಬಂದಿಲ್ಲ, ಅದನ್ನು ಹಿಡಿದುಕೊಂಡು class room ನಲ್ಲಿ insult ಮಾಡುತ್ತಾರೆ. Do you know boys are out to commit suicide? ಅವರಗೇನು ಸ್ವಾಭಿಮಾನ ಇಲ್ಲವೇ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: Social Welfare Departmentದು ನಿಮ್ಮ Higher Educationನವರು book adjustment ಮಾಡಿಕೊಂಡು ಇದು ಎಲ್ಲವೂ ಆಗುತ್ತದೆ. ನೀವು ಏತಕ್ಕಾಗಿ ಅವರ ಹತ್ತಿರ ಕಟ್ಟಿಸಿಕೊಳ್ಳುವಂತಹದ್ದು, ಪುನಃ ಅವರ ಹತ್ತಿರ ವಾಪಸ್ಸು ಪಡೆಯುವಂತಹದ್ದು ಅದು ಆಗಬಾರದು. 2002–03, 20003–04 ರದು ಸರಿಪಡಿಸಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಕೆ.ಆರ್. ರಮೇಶ್‌ಕುಮಾರ್‌ರವರು Fee ಬಗ್ಗೆ ಹೇಳಿದರು. ಕೇವಲ COMED-K ಯಲ್ಲಿ 1,25,000 plus 8,000, 4 1/2 ಮತ್ತು 5 ವರ್ಷಕ್ಕೆ ಅವನು 5 ರಿಂದ 6 ಲಕ್ಷ ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಇದು ಸಾಮಾನ್ಯ ವಿದ್ಯಾರ್ಥಿಗೆ ಸಾಧ್ಯವಿದೆಯೇ? ಬ್ಯಾಂಕ್‌ನವರು Education Loan ಕೊಡುತ್ತಾರೆಂದು ಇಟ್ಟುಕೊಳ್ಳಿ. ಅವನು ಹೊರಗಡೆ ಬಂದ ತಕ್ಷಣ ಉದ್ಯೋಗ ಸಿಕ್ಕಿದರೆ ಆಯಿತು. ಇಲ್ಲದಿದ್ದರೆ ಪರಿಸ್ಥಿತಿ ಏನಾಗಬೇಕು? ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೇ ಈ fee structureನ್ನು ಸರಿಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ನಾವು ಏನು ಮಾಡಿದ್ದೇವೆಂದರೆ, ವರ್ಷಾವರ್ಷ Management ಜೊತೆ adjust ಮಾಡಿಕೊಳ್ಳುತ್ತಾ ಹೋಗಿ fee ಜಾಸ್ತಿಯಾಗುತ್ತಾ ಹೋಗಿದೆ. Fee ನ್ನು ಕಡಿಮೆ ಮಾಡುವುದಕ್ಕಾಗಲಿಲ್ಲ. ಒಂದು ಸಾರಿ donation ಜಾಸ್ತಿ ಇದ್ದು fee ಕಡಿಮೆ ಇತ್ತು. ಆ donationನ್ನು ತೆಗೆಯುವುದಕ್ಕೆ ಹೋಗಿ ಸಂಪೂರ್ಣವಾಗಿ fee ಜಾಸ್ತಿಯಾಗಿ ಹೋಗಿದೆ. ಈಗ donation plus fee ಎರಡೂ ಉಳಿದುಕೊಂಡಿದೆ. fee ಜಾಸ್ತಿಯಾಗಿದೆ, donation ಸಹ ಉಳಿದುಕೊಂಡಿದೆ. ಇದನ್ನು ತಪ್ಪಿಸುವುದಕ್ಕೆ ತಾವು ಏನು ಮಾಡುತ್ತೀರಿ? ತಮಿಳುನಾಡಿನಲ್ಲಿ ನಾವು ಕೇಳಿದ ಕೂಡಲೇ ನೀವು ಹೇಳುತ್ತೀರಿ, Medical Council of India ದವರು ಮಾಡುವ ವ್ಯವಸ್ಥೆ ಎಂದು ಹೇಳುತ್ತೀರಿ. Medical Entranceಗೆ 100% CET Marks, ಆದರೆ ಅವನು PUC ಓದಬೇಕಾಗಿಲ್ಲ. Engineering ಗೆ 50-50 ಅವನು ಎರಡಕ್ಕೂ ಕೂಡ examಗೆ ಕುಳಿತುಕೊಳ್ಳುವಂತಹ ಪರಿಸ್ಥಿತಿ. ಅವನು ಎಲ್ಲವನ್ನೂ ಸಹ ಓದಬೇಕು. ಮಕ್ಕಳನ್ನು ಸಂಪೂರ್ಣವಾಗಿ ಕುಳಿತುಕೊಂಡು ಪುಸ್ತಕದಲ್ಲಿ ಓದುವಂತಹ ಪರಿಸ್ಥಿತಿಯನ್ನು ಮಾಡಬೇಡಿ. ತಮಗೆ ಕೇಳಿದರೆ Medical Council ತಮಿಳುನಾಡಿನಲ್ಲಿ ಏತಕ್ಕಾಗಿ ತೆಗೆದರು? ಬರೀ PUC Marks ಮೇಲೆ ಅವರು admission ಮಾಡುತ್ತಿದ್ದಾರೆ. ಏಕೆಂದರೆ Tamil nadu High Court has

accepted the decision of Tamilnadu Government. ಅದನ್ನು ಸ್ವಲ್ಪ ತರಿಸಿ. ರವಿವರ್ಮಕುಮಾರ್‌ರವರು ತಮಿಳುನಾಡು Government appear ಆಗಿದ್ದಾರೆ. ನಾವು ಈ ಸದನದಲ್ಲಿ ಹೇಳಿದ್ದೇವೆ. ಅದನ್ನು ತರಿಸಿ, ಹೇಗೆ ಮಾಡಿದ್ದಾರೆಂದು ಇಲ್ಲೂ ಸಹ ಅದನ್ನೇ ಮಾಡಿ ಮಕ್ಕಳಿಗೆ continuous ಆಗಿ PUC, CET Medical, ಗೊಂದ CET, Engineeringe ಗೆ ಒಂದು appear ಆಗುವ ಪರಿಸ್ಥಿತಿ, ಅದರ ಮೇಲೆ COMED-K ಆಮೇಲೆ Deemed University. ಇಷ್ಟು ಪರೀಕ್ಷೆಗಳಿಗೆ ಕುಳಿತುಕೊಳ್ಳಬೇಕಾದರೆ ಅವನ ಪರಿಸ್ಥಿತಿ ಏನಾಗಬೇಕು? ದಯವಿಟ್ಟು ಇದನ್ನು ಹೋಗಲಾಡಿಸುವ ವ್ಯವಸ್ಥೆ ಮಾಡಬೇಕು. ನಾನು ಮೊನ್ನೆ ದಿನ ಬಜೆಟ್ ಬಗ್ಗೆ ಮಾತನಾಡುವಾಗ ಹೇಳಿದೆ. ಕಳೆದ ವರ್ಷ ಮಂಗಳೂರಿನ ಏನಪೋಯ ಕಾಲೇಜ್‌ಗೆ ಸೀಟ್ ಮ್ಯಾಟ್ರಿಕ್ಸ್ ಏಕೆ ಕೊಡಲಿಲ್ಲ? ನಾನು ಈ ಬಗ್ಗೆ ಪ್ರಶ್ನೆಯನ್ನು ಕೇಳಿದರೂ ಕೂಡ ಉತ್ತರ ಬರಲಿಲ್ಲ. ಈ ಬಗ್ಗೆ ವೈದ್ಯಕೀಯ ಶಿಕ್ಷಣ ಸಚಿವರಿಗೂ ಪತ್ರವನ್ನು ಬರೆದರೂ ಕೂಡ ಉತ್ತರ ಬರಲಿಲ್ಲ. ಯಾವ ಕಾರಣಕ್ಕಾಗಿ Seat matrix ನ್ನು ಕೊಡಲಿಲ್ಲ ಎಂದು ನಾನು ಪುನಃ ಕೇಳುತ್ತಿದ್ದೇನೆ. ಅದಕ್ಕೆ ನನಗೆ ಉತ್ತರಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ 2007 ಏನು ಇದೆ, ಇದು ಅತ್ಯಂತ ಸಣ್ಣ amendment ಇದ್ದರೂ ಕೂಡ ಇದರ ಹಿನ್ನೆಲೆ ಏನು ಇದೆ ಅದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕಾಗಿರುವುದು ಬಹಳ ಮುಖ್ಯವಾಗಿದೆ, ಇದರಲ್ಲಿ ಎರಡು ಅಂಶಗಳು ಇವೆ. ಎಲ್ಲವನ್ನು ಸಂಪೂರ್ಣವಾಗಿ ಅಂದರೆ ಅದು ಇಂಜಿನಿಯರಿಂಗ್ ಇರಬಹುದು, ಮೆಡಿಕಲ್ ಇರಬಹುದು, un-aided institution ಏನವೆ naturally ಅವರಿಗೆ ಒಪ್ಪಂದದ ಮುಖಾಂತರ fees ನ್ನು ನಿಗದಿ ಮಾಡಿ ನಾವು ಕೊಟ್ಟಿದ್ದೇವೆ. ಆದರೆ ಅನೇಕ private Institutions ಗಳು ನೀವು ಏನು ಇವತ್ತು direction ಕೊಡುತ್ತಿದ್ದೀರಿ, ಆ directions ಒಪ್ಪಲ್ಲ. ಇನ್ನು ಎರಡನೆಯದಾಗಿ autonomous ಹೆಸರಿನಲ್ಲಿ ಅವರದೇ ಪರೀಕ್ಷೆ, ಅವರೇ exam conduct ಮಾಡುವುದು ಮತ್ತು deemed University ಹೆಸರಿನಲ್ಲಿ, ಈಗ deemed ಆಗಿದೆ, autonomous institutions ಎರಡೂ ಕೂಡ ಆಗಿದೆ. ಅದು deemed University. ಅವರು ತಮ್ಮ

ವೈಭವೀಕರಣಕ್ಕಾಗಿ ಅಥವಾ ವರ್ಚಸ್ಸನ್ನು ಶಿಕ್ಷಣ ಕ್ಷೇತ್ರದಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿ, ಅವರೆಲ್ಲರೂ deemed University ಮಾಡಿಕೊಂಡು, autonomous ಮಾಡಿಕೊಂಡು ಇವತ್ತು ಬಡ ವಿದ್ಯಾರ್ಥಿಗಳಿಗೆ ಅಲ್ಲಿ ಕಾಲಿಡಲಾರದಂತೆ ಆಗಿದೆ. ಕೇಂದ್ರ ಸರ್ಕಾರವೇ ಅವರಿಗೆ permission ಕೊಟ್ಟಿದೆ. Supreme Court ಸಹ ಹೇಳಿದೆ ಎನ್ನುವಂತಹ ವಾದವನ್ನು ತಾವು ಇಡಬಹುದು. ಅದರ ಬ್ಗಗೆ ನೀವು ಸಮಗ್ರವಾದ ವಿಧೇಯಕವನ್ನು ತಾವು ಮಂಡಿಸಿ, ಈ deemed University ಬಗ್ಗೆಯೂ ಕೂಡ. Ultimately, education is in the concurrent list, entirely Government of India ಕ್ಕೆ ಅಧಿಕಾರವಿಲ್ಲ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ನಮ್ಮ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಾವು ಒಂದು ಕಾನೂನನ್ನು ರಚಿಸಿ, ಎಲ್ಲಾ ವರ್ಗಕ್ಕೆ ಯಾವ ರೀತಿಯಾಗಿ ಸಹಾಯ ಮಾಡಬೇಕು ಅದನ್ನು ನಾವು ಮಾಡೋಣ. ಅದನ್ನು ಬಿಟ್ಟು ನಾವು ಈಗ deemed University ತಂದವರಿಗೆ ಬಿಟ್ಟುಬಿಡೋದು, ಅಲ್ಲಿ reservation ಕೂಡ ಇಲ್ಲ. ಕೆಲವು ಜನರು ಅಂತೂ ಈಗ ಮಹಾರಾಜರು ಮಾತನಾಡಿದ ಹಾಗೆ ಮಾತನಾಡ್ತಾರೆ. ವಿದ್ಯೆಗೂ ಮತ್ತು ಅವರಿಗೂ ಏನು ಗಂಧವೇ ಇಲ್ಲ. ಅದರ ಬಗ್ಗೆ interest ಕೂಡ ಇಲ್ಲ. ಎಂದೂ ಕೂಡ ಅವರು commited ಕೂಡ ಇಲ್ಲ. ಅಂತಹವರು ಕೂಡ ಇವತ್ತು ವಿದ್ಯಾಸಂಸ್ಥೆಗಳನ್ನು ನಡೆಸಿ ಅವರು ಏನೆಂದರೆ Educationist ಅಂತೆ. ಅವರ ಹೆಸರೆ ಬಿದ್ದಿದೆ. ಅವರು ಏನು ಮಾಡುತ್ತಾರೆ ಎಂದರೆ Educationist ಎಂದು ಹೇಳುತ್ತಾರೆ. ಇವೆಲ್ಲಾ pharmacy ಇರಬಹುದು, Nursing, Medical, Dental ಇರಬಹುದು, ಮುಂದೆ ಹಣ ಬಂದ ಮೇಲೆ naturally ಗುಡಿ ಗುಂಡಾರಗಳಿಗೆ ದುಡ್ಡು ಕೇಳಲು ಹೋದಾಗ philanthropist. ಅನೇಕ ಯುವಕರನ್ನು ನೀವು ಬೇಕಾದರೆ ಏನು ಮಾಡುತ್ತಿದ್ದೀರೆಂದು ಕೇಳಿ, ಆಗ ಅವರು ಒಂದು ಕಾಲೇಜನ್ನು ತೆಗೆದಿದ್ದೇನೆ ಎಂದು ಹೇಳುತ್ತಾರೆ. ಮತ್ಯಾರಿಗಾದರು ಏನಪ್ಪಾ ನಿನ್ನ profession ಎಂದು ಕೇಳಿದರೆ, "ಸರ್, ನಾನು ಒಂದೆರೆಡು ಕಾಲೇಜುಗಳನ್ನು ತೆಗೆದಿದ್ದೇನೆ" ಎಂದು ಹೇಳುತ್ತಾನೆ. ಎಂತಹ ಕಾಲೇಜು ಎಂದು ಕೇಳಿದರೆ English medium ಒಂದು, Nursing ಒಂದು, MBA ಒಂದು, ಇಂತಹದ್ದು ಎಂದು ಹೇಳುತ್ತಾನೆ. ಇದು ಒಂದು profession ಆಗಿದೆ. ನಿಜವಾಗಿಯೂ ಕಾಲೇಜು ನಡೆಸುವುದಕ್ಕೆ interest

ಇದ್ದವರಿದ್ದರೆ, ಅಥವಾ ಯಾವುದೇ ಸಂಘ ಸಂಸ್ಥೆಗಳು ಇದ್ದರೆ, ಟ್ರಸ್ಟ್‌ಗಳು ಇದ್ದರೆ ಅವರು ಇದರಲ್ಲಿ ಆಸಕ್ತಿ ಇದ್ದು ಬೇಕಾದರೆ ಕೆಲಸ ಮಾಡುವಂತಹವರು ಇದ್ದಾಗ ನಾವು ಇದಕ್ಕೆ ಒಂದು ಮಾರ್ಗಸೂಚಿಯನ್ನು ಇಟ್ಟು, ಒಂದು ವಿಶೇಷವಾದಂತಹ ಕಾನೂನು ರೂಪಿಸಿ ಅದನ್ನು ಮಾಡುವುದು ಉತ್ತಮ. ಇಲ್ಲದೇ ಇದ್ದರೆ ಏನಾಗುತ್ತದೆ ಎಂದರೆ ಎಲ್ಲಿ ಬೇಕು ಅಲ್ಲಿ ನೂರಾರು ಕಾಲೇಜುಗಳು ಇವತ್ತು ಬಂದು naturally ನಿಮ್ಮಿಂದ admission ತೆಗೆದುಕೊಳ್ಳುತ್ತಾರೆ. ಈಗಾಗಲೇ ಮಾನ್ಯ ರಮೇಶ್‌ಕುಮಾರ್‌ರವರು ಹಾಗೂ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ ಅಲ್ಲಿ ನೀವು ಏನು admission ಕೊಡುತ್ತೀರಿ, ಅದು SC/ST Students ಇರಬಹುದು, Backward ಇರಬಹುದು, ಅಥವ roster ಪದ್ಧತಿಯ ಪ್ರಕಾರ ಯಾವ ವಿದ್ಯಾರ್ಥಿಗಳು ಅಲ್ಲಿ admission ತೆಗೆದುಕೊಳ್ಳುತ್ತಾರೋ ಅವರಿಗೆ ನೇರವಾಗಿ Social Welfare Department ನಿಂದ ಅಥವಾ Backward Classes Officer ರವರಿಂದ fees ಹೋಗುವುದಿಲ್ಲ. ಅವರು ಅದನ್ನು ತಕ್ಷಣ ಕೊಡುವುದಿಲ್ಲ. ಅವನು ನೀನು ಮೊದಲು ಹಣವನ್ನು ತುಂಬು ಎಂದು ಸತಾಯಿಸುತ್ತಾನೆ. ಆಮೇಲೆ admission ತೆಗೆದುಕೊಳ್ಳಿ ಎಂದು ಹೇಳುತ್ತಾನೆ. ಈಗ ಅವನ ಹತ್ತಿರ ದುಡ್ಡು ತುಂಬುವುದಕ್ಕೆ ಹಣ ಇರುವುದಿಲ್ಲ. ಅವನು ಹಣವನ್ನು ತುಂಬುವುದಿಲ್ಲ, ಆ ಸೀಟು ಕೊನೆ ಘಳಿಗೆಗೆ management ನವರಿಗೆ ಯಾರು ಲಕ್ಷಾಂತರ ರೂಗಳನ್ನು ಕೊಡುತ್ತಾರೋ ಅವರಿಗೆ ತುಂಬುವುದಕ್ಕೆ ಅನುಮತಿಯನ್ನು ಕೊಡುತ್ತಾರೆ. ಹೀಗೆ ಆಗುವುದರಿಂದ ಏನಾಗುತ್ತಿದೆ ಎಂದರೆ genuine private instructions ಗಳಲ್ಲಿ ಕೂಡ SC/ST ಹುಡುಗರಿಗೆ ರೋಸ್ಟರ್ ಸಿಸ್ಟಮ್ ಮೇಲೆ ಬ್ಯಾಕ್ ವರ್ಡ್ ವಿದ್ಯಾರ್ಥಿಗಳಿಗೆ ಈ ರೋಸ್ಟರ್ ಪದ್ಧತಿಯ ಪ್ರಕಾರ ಏನು ಕೊಡುತ್ತಿದ್ದೀರಿ, ಅದರಿಂದ ದೊಡ್ಡ ಅನ್ಯಾಯವೋ ಕೂಡ ಆಗುತ್ತಿದೆ, ಮತ್ತು ಅವರಿಗೆ humiliation ಕೂಡ ಆಗುತ್ತಿದೆ, ಮತ್ತು ಸಾಕಷ್ಟು ಸಲ ಅವರನ್ನು examination ಗೆ ಕೂರಿಸುವುದಿಲ್ಲ. ನೀವು fees ನ್ನು ತಂದು ಕಟ್ಟಿ ಆಮೇಲೆ exam ಗೆ ಕೂರಿಸುತ್ತೇವೆಂದು ಹೇಳುತ್ತಾರೆ. ಇನ್ನು ನಮ್ಮ Director of Social Welfare ರವರು ಅಲ್ಲಿಗೆ timely ಹೋಗುವುದಿಲ್ಲ. ಅಥವಾ ನೀವು ಯಾವುದೇ condition ನಿಂದ ಅವರನ್ನು examಗೆ ಕೂರಿಸದೇ ಹೋದರೆ ನಾವು de-recognize ಮಾಡುತ್ತೇವೆ ಎಂದು ಒಂದು

direction ಕೊಡಿ. ಇಲ್ಲಾ ನಿಮ್ಮಲ್ಲಿ examination ಗೆ conduct ಮಾಡಿಸಿಕೊಳ್ಳುವುದಿಲ್ಲ; ನಿಮ್ಮ entire institution will be barred from taking the examination ಎಂದು ನೀವು ಹೇಳಿದಾಗ ಆಗ ಅವರು ಅವರಿಗೆ allow ಮಾಡುತ್ತಾರೆ. ಏಕೆಂದರೆ ಸರ್ಕಾರದ ತಪ್ಪಿನಿಂದ ಆ ಮಕ್ಕಳ ಮೇಲೆ ಬೇರೆ ಪರಿಣಾಮಗಳು ಆಗುತ್ತದೆ. ಅವರಿಗೆ humiliation ಕೂಡ ಆಗುತ್ತದೆ, ಅವರ ಹೆಸರನ್ನು notice board ಮೇಲೆ ಹಾಕುತ್ತಾರೆ. ಇಂತಿಂತಹ ವಿದ್ಯಾರ್ಥಿಗಳು fees ತುಂಬಿಲ್ಲ, ನಾವು ಅವರಿಗೆ examಗೆ allow ಮಾಡುವುದಿಲ್ಲ. ಇಲ್ಲಾ ನೀವು examination fees ಅನ್ನು ಕಟ್ಟಿಲ್ಲ ನೀವು ಹೊರಗೆ ಹೋಗಿ ಎಂದು ಕ್ಲಾಸ್ ರೂಂನಲ್ಲಿ ಹೇಳುತ್ತಾರೆ. ಸಂಬಂಧಪಟ್ಟವರು ರೆಗ್ಯುಲರ್ fees ನ್ನು ಕಟ್ಟಿಲ್ಲ, ಎಂದು ಹೇಳಿ ಕಳುಹಿಸುತ್ತಾರೆ. ಇದರಿಂದ ಬಹಳಷ್ಟು ಜನರು ಒಂದು ಮಾನಸಿಕ ಹಿಂಸೆಗೆ ಒಳಪಟ್ಟು, sensitive ವಿದ್ಯಾರ್ಥಿಗಳು ಕಾಲೇಜನ್ನು ಬಿಡುತ್ತಾರೆ. ಇನ್ನು ಕೆಲವರು suicide ಮಾಡಿಕೊಳ್ಳುತ್ತಾರೆ.ಈ ಒಂದು ದೊಡ್ಡ ಪರಿಣಾಮ ಅವರ ಮನಸ್ಸಿನ ಮೇಲೆ ಆಗುತ್ತದೆ. ನಮಗೆ ಈ ಜಾತಿಯ ಕಳಂಕ ಇರುವುದರಿಂದ ಈ ರೀತಿಯಾಗಿದೆಯೇನೋ ಅನ್ನತಕ್ಕಂತಹ ಭಾವನೆ ಬರುತ್ತದೆ. ಈಗಾಗಲೇ ನೀವು income limit ಹಾಕಿದ್ದೀರಿ, ಅದರಲ್ಲಿ naturally ಶ್ರೀಮಂತರ ಮಕ್ಕಳು ಅಥವಾ scheduled caste ಮೇಲೆ income limit ಇರುವುದರಿಂದ ಈಗ ನೀವು ಬಡವರ ಮಕ್ಕಳಿಗೆ ಸೀಟು ಕೊಡುವ ಬಗ್ಗೆ ಅವರನ್ನು ತಾವು ನೋಡಬೇಕಲ್ಲವೇ? ಈ NRI seat ಕೊಡಿ, ಕೆಲವು institutionಗಳಲ್ಲಿ ಸೀಟುಗಳು ಬಡ ಮಕ್ಕಳಿಗೆ ಕೊಡಬೇಕೆಂದರೂ ಕೂಡ ಈ normal rules applicable ಮಾಡುವುದಿಲ್ಲ. ಏಕೆಂದರೆ NRI ಹುಡುಗರು ಬರಲಿಲ್ಲವೆಂದು ತಿಳಿದುಕೊಳ್ಳಿ. ನೀವು ಒಂದು instituteಗೆ 10 ಸೀಟ್ allocate ಮಾಡುತ್ತೀರೆಂದು ತಿಳಿದುಕೊಳ್ಳಿ. 8 ವಿದ್ಯಾರ್ಥಿಗಳು ಬರುತ್ತಾರೆ. ಇನ್ನು 2 ಸೀಟು ಖಾಲಿ ಇರುತ್ತವೆ. They wanted to give to local people with local merit, ಅಂದರೆ minimum requirement 50%, SC:ST ಗೆ 45%, ಅಂದಾಗ 45% suppose ಏನಾದರೂ NRI quote ದಲ್ಲಿ ನೀವು ಬರುತ್ತಿದ್ದರೆಂದರೆ ನಿಮಗೆ ಏನು ಸರ್ಕಾರದಿಂದ ಗಂಟು ಹೋಗುವುದಿಲ್ಲ. ಅಥವಾ managementಗೆ ಇಷ್ಟೇ fees ತೆಗೆದುಕೊಂಡು ಬಂದು

ಕೊಡಬೇಕಾಗಿತ್ತು ಎಂಬ ಒತ್ತಾಯವನ್ನು ಕೂಡ ಮಾಡುವಂತಹ ಅಧಿಕಾರವಿಲ್ಲ. ಆದರೆ ಅವರು ಮಾಡುತ್ತಾರೆ ಇಂತಿಂಥವರಿಗೆ ಕೊಡಬೇಕಾಗುತ್ತದೆ ಎಂದು ತಿಳಿದುಕೊಂಡು ಇಲ್ಲಾ ಇಲ್ಲಾ, 45% ಮಾರ್ಕ್ಸ್ ಇದೆ, ನಿಮಗೆ 50% marks ಇಲ್ಲ, ಇದು NRI quota ದು, ನೀವು ಅಷ್ಟೇ fees ತುಂಬಿದರೆ, ಕೊಡುತ್ತೇವೆಂದು ಹೇಳುತ್ತಾರೆ. ಇವೆಲ್ಲಾ ವ್ಯತ್ಯಾಸಗಳು ಇವೆ. ಅದಕ್ಕೆ ನಾನು ತಮಗೆ ಹೇಳುತ್ತೇನೆ, ಇದು ಒಂದು ಕಡೆ ಇವರ ತೊಂದರೆ ಮೆರಿಟ್ ಹುಡುಗರದು, ಇದಕ್ಕಿಂತ ಮುಂಚೆ ತಮಗೆ ಗೊತ್ತಿದೆ, ಅತ್ಯಂತ ಕಡಿಮೆ fees ನಲ್ಲಿ ಆಗುತ್ತಿತ್ತು. ನೀವು ಏನು ವಾದ ಮಾಡುತ್ತೀರೆಂದರೆ, ಇವತ್ತು institutionನ್ನು ಹೆಚ್ಚಿಗೆ ಮಾಡಿದ್ದೇವೆ, ಸರ್ಕಾರಿ ಕಾಲೇಜುಗಳನ್ನು ಮಾಡಿದ್ದೇವೆ, ಅವರಿಗೆ ಏನು quota ಸಿಗುತ್ತಿತ್ತು. ಅದಕ್ಕಿಂತಲೂ ಹೆಚ್ಚಿನ quota ಇವತ್ತು ಸಿಗುತ್ತಿದೆ. ನಿಮಗಿಂತ ಹೆಚ್ಚಾಗಿ ನಾವು ವಿದ್ಯಾರ್ಥಿಗಳಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಇದು ಹಾಗಲ್ಲ, institution ಜಾಸ್ತಿ ಆದರೆ naturally merit seat ಜಾಸ್ತಿಯಾಗುತ್ತದೆ. ನೀವು ಮತ್ತೆ private ನವರಿಗೆ ಜಾಸ್ತಿ permission ಕೊಟ್ಟುಕೊಂಡು ಹೋದಾಗ, ಸಹಜವಾಗಿ ಆ ಸೀಟು ಕೂಡ ಜಾಸ್ತಿಯಾಗುತ್ತಾ ಹೋಗುತ್ತದೆ. ಅದರ ಅರ್ಥ ಜಾಸ್ತಿ ಸೀಟು ಆಗಿದೆ ಎಂದು ಹೇಳಿ ಹೆಚ್ಚಿನ fees ಮಾಡಬೇಕೆಂದು ಇಲ್ಲ, ನಮ್ಮಲ್ಲಿ ಹಾಗೆ ಆಗಿದ್ದು, ಅದಕ್ಕಾಗಿ ನೀವು ಮೆರಿಟ್ ಹುಡುಗರಿಗೆ ಮೆರಿಟ್ ಎಂದರೆ ಅವನಿಗೆ recognize ಮಾಡಬೇಕೆಂದರೆ ಅತ್ಯಂತ ಕಡಿಮೆ feesನಲ್ಲಿ ಕೊಟ್ಟಾಗ ಮಾತ್ರ ಮಾನ್ಯತೆ ಮಾಡಿದಂತಾಗುತ್ತದೆ. ಯಾವ ದಲಿತ ವಿದ್ಯಾರ್ಥಿಗಳು. ಬಡ ವಿದ್ಯಾರ್ಥಿಗಳು ಮೆರಿಟ್‌ನಲ್ಲಿ ಬರುತ್ತಾರೋ, ಅವರಿಗೆ ಮೆರಿಟ್ quotaದಲ್ಲಿ ಈ private un-aided institutionನವರು ಸೇರಿಸುವುದಿಲ್ಲ. ಏತಕ್ಕಾಗಿ ಸೇರಿಸುವುದಿಲ್ಲವೆಂದರೆ ನಿಮಗೆ 18% ಇದೆಯಲ್ಲಾ ಅಲ್ಲಿಗೆ ನೀವು ಹೋಗಿ ಎಂದು ಹೇಳುತ್ತಾರೆ. ಅವನು ನೇರವಾಗಿ 100 ಹುಡುಗರಲ್ಲಿ ಮೆರಿಟ್‌ನವರಿಗೆ 20 ಸೀಟು ಇದ್ದರೆ 20ರಲ್ಲಿ ಅವನ ನಂಬರ್ ಬಂದರೆ ಅವನನ್ನು ಏತಕ್ಕಾಗಿ 18%ನಲ್ಲಿ ತಳ್ಳುತ್ತೀರಿ? Because, he has competed with others, he has scored more marks than others. ನಿಮ್ಮ ಗುರಿ ಇರುವುದು ಏನು? Minimum reservation ಆ ಜನಾಂಗಕ್ಕೆ ಕೊಡಬೇಕೆಂದು ದೃಷ್ಟಿಯಿಂದ ಇರುವುದು. ಆದರೆ ಮೆರಿಟ್‌ನಲ್ಲಿ ಬಂದಿರುವವರಿಗೆ

ಕೊಡಬಾರದು ಎಂದು ಹೇಳುವುದು ಆಗಬಾರದು. ಆ ರೀತಿಯಾಗಿ ಹೇಳಿದರೆ ಇದು ಸಂವಿಧಾನದ ವಿರುದ್ಧ, ಸುಪ್ರೀಂಕೋರ್ಟಿನ ನಿರ್ಣಯದ ವಿರುದ್ಧವಾಗುತ್ತದೆ. ನೀವು recruitment ನಲ್ಲಿಯೂ ಕೂಡ ಹಾಗೆಯೇ ಮಾಡುತ್ತಿದ್ದೀರಿ, ಮಾನ್ಯ ರೇವಣ್ಣನವರ recruitment ಇದೆಯಲ್ಲಾ discretionary recruitment; ಆ recruitment ನಲ್ಲಿ ಇದನ್ನೇ ಹೇಳಿದ್ದಾರೆ. ರೇವಣ್ಣನವರ discretionary recruitment ಇದೆ. ಅವರು centre of attraction. ನೋಡಿ ಅವರು 100 ವರ್ಷ ಇದ್ದು ಬಿಡುತ್ತಾರೆ. ಏಕೆಂದರೆ ಅವರಿಗೆ ದೇವರಲ್ಲಿ ಭಕ್ತಿ ಮತ್ತು ಅನೇಕ ಕಡೆ ಹೋಗುವುದು ಪೂಜೆ ಮಾಡುವುದು, ಪುರಸ್ಕಾರ ಮಾಡುವುದು ಇದೆ. ಅಸೆಂಬ್ಲಿಯಲ್ಲಿ ಹೆಜ್ಜೆ ಇಡಬೇಕಾದರೂ ಕೂಡ ಅವರು time ನೋಡಿಕೊಂಡೇ ಹೆಜ್ಜೆ ಇಡುತ್ತಾರೆ. ನಿಮ್ಮ ಕ್ಯಾಬಿನೆಟ್‌ನಲ್ಲಿ ನೀವೆಲ್ಲಾ ಬಿ.ಜೆ.ಪಿ.ಯವರು ಎಷ್ಟು ಜನ ಇದ್ದೀರಿ, ಯಜ್ಞ, ಹವನ, ಪೂಜೆ ಇವೆಲ್ಲಾ ಮಾಡುತ್ತಿರುತ್ತೀರಿ, ಹೀಗಿದ್ದರೂ ನೀವೆಲ್ಲಾ ಶ್ರೀ ರೇವಣ್ಣನವರಿಗೆ ಶರಣು ಹೋಗುವ ಸ್ಥಿತಿ ಬಂತೆಂದರೆ ಅವರು ಮಹಾ ಬ್ರಾಹ್ಮಣನೋ ಏನೋ ಎಂಬುದನ್ನು ನೀವೇ ಲೆಕ್ಕ ಹಾಕಿ. ಅವರಿಗೆ ಕೇಳಿಯೇ ನೀವು ಕ್ಯಾಬಿನೆಟ್ ಮೀಟಿಂಗ್ ಇಡುತ್ತೀರಿ. ಅದು ಏನು ಎಂದರೆ ನಮ್ಮ ಅಸೆಂಬ್ಲಿ ಸೇರಲಿಕ್ಕೆ ಸಹ ಅವರನ್ನು ಕೇಳಿ 12.45. ಗಂಟೆಗೆ ಸಮಯ ನಿಗದಿ ಮಾಡುತ್ತೀರಿ, ಅಧ್ಯಕ್ಷರೆ, ನೀವು ಸಹ ಅದಕ್ಕೆ ಬಲಿಯಾದಿರಿ.

ಅಧ್ಯಕ್ಷರು:- ಇಲ್ಲ, ಕ್ಯಾಬಿನೆಟ್‌ನಲ್ಲಿ ಏನು ತೀರ್ಮಾನವಾಗುತ್ತದೋ ಅದು, Hon'ble Governorಗೆ ಹೋಗುತ್ತದೆ. Hon'ble Governor ರವರು ಕಳುಹಿಸಿದ್ದನ್ನು ನಾವು ಪಾಲಿಸಬೇಕು. Why do you blame me? No, No that is not correct.

Sri.K.R.RAMESH KUMAR:- Sir, it is not fair, Governor, on the recommendation of the cabinet, only suggests that you convene the Assembly, He doesn't say you shall convene the Assembly at this hour. That discretion rests with you. The fact remains……..

ಅಧ್ಯಕ್ಷರು:- No, no Governor Office ನಿಂದ ನಿರ್ಣಯ ಬರುತ್ತದೆ. We have no option.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ರೇವಣ್ಣನವರ influence ಎಷ್ಟಿದೆಯೆಂದರೆ ಅಸೆಂಬ್ಲಿ convene ಮಾಡಲಿಕ್ಕೆ ಸಮಯ ನಿಗದಿಪಡಿಸಲಿಕ್ಕೂ ಕೂಡ ರೇವಣ್ಣನವರನ್ನು ಕೇಳಬೇಕಾಗುತ್ತದೆ. ಅದಕ್ಕಾಗಿ ಈ ಬಿಜೆಪಿಯವರ ಗ್ರಹಚಾರ ನೋಡಿ, ನಾವೆಲ್ಲಾ ಬಹಳ ಪಂಡಿತರು, ನಾವು ಈ ತತ್ವದ ಮೇಲೆ, ಹಿಂದುತ್ವದ ಮೇಲೆ ನಡೆಯುತ್ತೇವೆಂದು ಹೇಳುವವರು ರೇವಣ್ಣನವರ ಹತ್ತಿರ ಸಮಯ ಕೇಳಿಕೊಂಡು ಬರುತ್ತಾರೆಂದರೆ ನಾವೇನು ಹೇಳಬೇಕು.

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ನಾವೆಲ್ಲಾ ಮುಹೂರ್ತ ನೋಡಿಕೊಂಡು ಬಂದಿದ್ದಕ್ಕೆ ಅಸೆಂಬ್ಲಿ ಶಾಂತವಾಗಿ ನಡೆದಿದೆ ಎಂದು ರೇವಣ್ಣನವರು ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಶಾಂತವಾಗಿ ನಡೆಯಲಿ ಎಂದು ಅವರು ಮುಹೂರ್ತ ನೋಡಿಕೊಂಡು ಬಂದಿರಬಹುದು, ಆದರೆ ನಾವು ಗಲಾಟೆ ಮಾಡಬಾರದೆಂದು ನಿರ್ಣಯ ತೆಗೆದುಕೊಂಡು ಬಂದಿದ್ದಕ್ಕಾಗಿಯೇ ಗಲಾಟೆ ಆಗುತ್ತಿಲ್ಲ. ಟೈಮ್ ನೋಡಿಕೊಂಡು ಬಂದಿದ್ದೇವೆಂದು ಅವರು ಹೇಳುತ್ತಾರೆ., ನಾವು ಈ ಸಾರಿ ಅಸೆಂಬ್ಲಿ ಚೆನ್ನಾಗಿ ನಡೆಸಬೇಕೆಂದು ವಿರೋಧ ಪಕ್ಷದ ನಾಯಕರಿಂದ ಆದಿಯಾಗಿ ಎಲ್ಲರೂ ಸೇರಿ ಒಂದು ನಿರ್ಣಯವನ್ನು ತೆಗೆದುಕೊಂಡ ಮೇಲೆ ಅಸೆಂಬ್ಲಿ ಸುಲಲಿತವಾಗಿ ನಡೆದಿದೆ. ಈಗ ಅವರು ತಮ್ಮ ಇಚ್ಛೆ ಪ್ರಕಾರ ಹೇಳುತ್ತಾರೆ. ಅಧ್ಯಕ್ಷರೆ, ತಾವು ತಪ್ಪು ತಿಳಿದುಕೊಳ್ಳಬೇಡಿ, ನಾನೊಂದು ಮಾತನ್ನು ಹೇಳುತ್ತೇನೆ. ಸಂತ ತುಕರಾಂ ಒಂದು ಮಾತನ್ನು ಹೇಳಿದ್ದಾರೆ, "ಹರಕೆ ಮಾಡುವುದರಿಂದಲೇ ಮಕ್ಕಳು ಹುಟ್ಟುವುದಿಲ್ಲ" ಎಂದು. "ನವಸೀ ಪುತ್ರ ಕನ್ಯಾಸತೀತರ್ ಪತಿಲಾಗನೇ ಕಾಯ್‌ಕರನಾ" ಎಂದು ಹೇಳಿದ್ದಾರೆ. ಹರಕೆ ಮಾಡುವುದರಿಂದಲೇ ಮಕ್ಕಳಾಗುತ್ತವೆ ಅಂದರೆ ಗಂಡನ ಅವಶ್ಯಕತೆಯೇ ಇರಲಿಲ್ಲ. ಲಗ್ನವನ್ನೇ ಯಾರೂ ಮಾಡಿಕೊಳ್ಳುತ್ತಿರಲಿಲ್ಲ. ಹಾಗಾಗಿ ರೇವಣ್ಣನವರೇ ಎಲ್ಲವೂ ಅದರ ಮೇಲೆ ನಡೆಯುವ ಹಾಗಿದ್ದರೆ, ಜನ ಸುಮ್ಮನೆ ಕೈಕಟ್ಟಿಕೊಂಡು ಕುಳಿತಿರುತ್ತಿದ್ದರು. ಅದಕ್ಕೆ ನಾವೂ ಕೂಡ ಯೋಚನೆ ಮಾಡುತ್ತಿದ್ದೇವೆ. ಎಲ್ಲವೂ ಕೂಡ ಸುಲಲಿತವಾಗಿ ನಡೆಯುತ್ತಿದೆ, ಕೆಲವು ಸಂದರ್ಭಗಳಲ್ಲಿ ಅದೇನೇ ಇರಲಿ, ಅದು ಅವರ ಭಕ್ತಿ, ನಂಬಿಕೆ.

ನಾವು ಅದರ ಮೇಲೆ comment ಮಾಡಲಿಕ್ಕೆ ಹೋಗುವುದಿಲ್ಲ. ಅದರೆ ನಮಗೆ comment ಅಂದರೆ......

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಈಗ ನಮ್ಮ ನಾಯಕರು ಇದ್ದಾರೆ, ಅವರು ಏನು ಆಶೀರ್ವಾದ ಮಾಡುತ್ತಾರೋ ಅದನ್ನು ನಾವು ಸ್ವೀಕರಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೋಡಿ. ಸಾಕಪ್ಪಾ, ನೀವು ಹೀಗೆ ಹೇಳಿ ಹೇಳಿ ಎಲ್ಲರನ್ನು ತಣ್ಣಗೆ ಮಾಡಿಬಿಟ್ಟಿದ್ದೀರಿ. ನಾವು further ತಣ್ಣಗೆ ಆಗುವುದು ಬೇಡ. ನಾನು ಹೇಳುವುದೇನೆಂದರೆ, ಈ ವೃತ್ತಿಪರ ಶಿಕ್ಷಣದ ಬಗ್ಗೆ ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ನಮ್ಮ ಸರ್ಕಾರ ಇರಬಹುದು, ನಿಮ್ಮ ಸರ್ಕಾರ ಇರಬಹುದು, ಕಾಲೇಜುಗಳನ್ನು indiscriminately ಕೊಡುತ್ತಿದ್ದಾರೆ. ನಮ್ಮಲ್ಲಿ ಬಂದರೆ ನಾವು ಕೊಡುತ್ತೇವೆ. Competitionನ ರೀತಿಯಲ್ಲಿ ನಾವು ಹತ್ತು ಕೊಟ್ಟರೆ, ನೀವು ಇಪ್ಪತ್ತು ಕೊಡಬಹುದು. ನಾವು ಇಪ್ಪತ್ತು ಕೊಟ್ಟರೆ, ನೀವು ನಲವತ್ತು ಕೊಡಬಹುದು. ಹೀಗೆ ನಡೆಯುವುದರಿಂದ ಈ ಕ್ಷೇತ್ರದಲ್ಲಿ ಶಿಸ್ತನ್ನು ಕಳೆದುಕೊಂಡಿದೆ. ಅಷ್ಟೇ ಅಲ್ಲ ಮೆರಿಟ್ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಬಡ ವಿದ್ಯಾರ್ಥಿಗಳಿಗೂ ಕೂಡ ಒಳ್ಳೊಳ್ಳೆಯ institutions ನಲ್ಲಿ ಸ್ಥಾನ ಮಾನ ಸಿಗುತ್ತಿಲ್ಲ. Recruitment ನಲ್ಲಿಯೂ ಕೂಡ ತೊಂದರೆಯಾಗುತ್ತಿದೆ, ಈಗ candidates available ಇಲ್ಲ, ಅದಕ್ಕಾಗಿ ಬಾಂಬೆ, ಪೂನಾ, ಶೋಲಾಪುರ್ ಎಲ್ಲೆಲ್ಲಿ ಸಿಗುತ್ತಾರೋ ಅಲ್ಲಿಂದ ಕರೆದುಕೊಂಡು ಬರುತ್ತಾರೆ. ಆದರೆ ಒಂದು ಸಾರಿ stabilize ಆದ ಮೇಲೆ ಬಡ ವಿದ್ಯಾರ್ಥಿಗಳನ್ನು recruitmentಗಳಲ್ಲಿ ತೆಗೆದುಕೊಳ್ಳುವುದಿಲ್ಲ. ಅದಕ್ಕೆ admission , ತಾವು ಇದರ ಬಗ್ಗೆ ಸಮಗ್ರವಾಗಿ ಯೋಚನೆ ಮಾಡಿ ಒಂದು ಕಾನೂನನ್ನು ತನ್ನಿ. ಇಲ್ಲವಾದರೆ ಈ ಮೆರಿಟ್ ವಿದ್ಯಾರ್ಥಿಗಳಿಗೆ ದೊಡ್ಡ ಅನ್ಯಾಯವಾಗುತ್ತಿದೆ, ಅವರಿಗೂ ಕೂಡ ಇವತ್ತು ಹೆಚ್ಚಾಗಿ fees ಕೊಡುವಂತಾಯಿತು. Directorate of Social Welfare, Backward Classes ಇಲಾಖೆಯಿಂದ ಸಮಯಕ್ಕೆ ಸರಿಯಾಗಿ ಫೀಸ್ ತಲುಪದಿರುವ ಕಾರಣ ಈ ರೋಸ್ಟರ್ ಸಿಸ್ಟಮ್‌ನಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೂ ಕೂಡ ತೊಂದರೆಯಾಗಿದೆ. ಅದಕ್ಕೆ ಮಹಾರಾಷ್ಟ್ರದಲ್ಲಿ ಒಂದು ಪದ್ಧತಿಯಿದೆ.

Particularly, ಆ ಮರಾಠಾವಾಡಾ ಯುನಿವರ್ಸಿಟಿಯಲ್ಲಿ ನಾನು ನೋಡಿದ್ದು, ಅವರು ಏನು ಮಾಡುತ್ತಾರೆಂದರೆ, ಈ ರೋಸ್ಟರ್ ಪದ್ಧತಿಯಲ್ಲಿ admission ಆದಂಥ ವಿದ್ಯಾರ್ಥಿಗಳ feesನ್ನು ಸಂಸ್ಥೆಯವರಿಗೆ in advance fees ಅನ್ನು Social welfare department ನವರೇ ಕಳುಹಿಸುತ್ತಿದ್ದರು. ಹಾಗೆ ಕಳುಹಿಸಿದಾಗ ಯಾವ್ಯಾವ ವಿದ್ಯಾರ್ಥಿಗಳ fees ಅನ್ನು deduct ಮಾಡಿಕೊಳ್ಳಬೇಕೋ ಅವರ fees ಅನ್ನು deduct ಮಾಡಿಕೊಂಡು ಯುನಿವರ್ಸಿಟಿಯ ಮೂಲಕ ಆಯಾಯ ಕಾಲೇಜುಗಳಿಗೆ ಅವರು ಕಳುಹಿಸುತ್ತಿದ್ದರು. ಹಾಗೆ ನೀವು Social Welfare Department ನಿಂದ direct ಆಗಿ institutionsಗೆ ಕಳುಹಿಸುವುದನ್ನಾದರೂ ಮಾಡಿ. ಇಲ್ಲವೇ ಸರ್ಕಾರದವರೇ ನೇರವಾಗಿ individual ಆಗಿ ಅವರಿಗೆ ಕಳುಹಿಸಿ ಯಾವ ಸಂಸ್ಥೆಯಲ್ಲಿ ಅವರು admission ತೆಗೆದುಕೊಳ್ಳುತ್ತಾರೋ ಅವರಿಗೆ ಅದನ್ನು ಕೊಡುವಂಥದ್ದನ್ನು ಮಾಡಿ. ಆ humiliation ತಪ್ಪದಿದ್ದರೆ, ಎರಡು, ಮೂರು ವರ್ಷ un-aided institutions ಗೆ ಸಿಗುವುದಿಲ್ಲವೆಂದು ತಿಳಿದುಕೊಂಡು ಅವರಿಗೂ ಬೇಸರವಾಗುತ್ತದೆ.ಕೊನೆಗೆ ಏನಾಗುತ್ತದೆಂದರೆ ಕೆಲವು ಸಲ ಅವರು ಸಿಟ್ಟಿಗೆದ್ದು ಇವರೆಲ್ಲಾ ಸುಡುಗಾಡು ಸೇರಲಿ, ಇವರೆಲ್ಲಾ drop ಆಗಿ ಹೋಗಲಿ ಎಂದು practicalನಲ್ಲಿ ವಿದ್ಯಾರ್ಥಿಗಳನ್ನು fail ಮಾಡಿಬಿಡುತ್ತಾರೆ. ಇವೆಲ್ಲಾ ಕೂಡ ಆಗುತ್ತವೆ. ಹಾಗಾಗಿ ಇದರ ಬಗ್ಗೆ ತಾವು ಕಟ್ಟುನಿಟ್ಟಾದಂಥ ನಿರ್ಣಯವನ್ನು ತೆಗೆದುಕೊಳ್ಳಬೇಕು ಮತ್ತು ಮೆರಿಟ್ ವಿದ್ಯಾರ್ಥಿಗಳಿಗೆ fees ಅನ್ನು ಕಡಿಮೆ ಮಾಡದೇ ಹೋದರೆ ನಾವೆಲ್ಲರೂ ಇದ್ದರೂ ಕೂಡ ನಮ್ಮಿಂದ ಅವರಿಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲ. ಮೂರನೆಯದಾಗಿ autonomous ಎಂದು ಹೇಳಿ ನಾವೇ supreme ಎಂದು ಹೇಳಿಕೊಂಡು ಕಾಲೇಜುಗಳು ಇವತ್ತು independent ಆಗಿ ಇವತ್ತು ಮಲೇಶಿಯಾ, ಸಿಂಗಪೂರ್, ಅಲ್ಲಿನ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಓದಬಹುದು. ನಮ್ಮ ವಿದ್ಯಾರ್ಥಿಗಳಿಗೆ ಅನೇಕ ಸಾರಿ ಅವಕಾಶ ದೊರೆಯುವುದಿಲ್ಲ. ಅದರ ಅರ್ಥ, institutions ಅನ್ನು ಕೊಲ್ಲಬೇಕೆಂದು ನಾನು ಹೇಳುತ್ತಿಲ್ಲ. Institutions survive ಮಾಡಿ ಈ ವಿದ್ಯಾರ್ಥಿಗಳಿಗೆ ಯಾವ ರೀತಿಯಾಗಿ ಲಾಭ ಮಾಡಬೇಕೆಂಬುದರ ಬಗ್ಗೆ ನಾನು ಹೇಳುತ್ತಿದ್ದೇನೆ. ಆದರೆ ದಯವಿಟ್ಟು fees ಕಡಿಮೆ ಮಾಡುವುದನ್ನು ಯೋಚನೆ ಮಾಡಿ, autonomous ಸಂಸ್ಥೆಗಳ ಮೇಲೆ ಹಿಡಿತ ಇಡಲಿಕ್ಕೆ

ವಿಶೇಷವಾದಂಥ ಕಾನೂನನ್ನು ತನ್ನಿ. Deemed Universityಗೆ ಬುದ್ಧಿ ಹೇಳಲಿಕ್ಕೆ ಅವರಿಗೆ ಕೂಡ ಒಂದು ಕಾನೂನನ್ನು ಮಾಡಲೇಬೇಕು. ಇಲ್ಲದೇ ಹೋದರೆ slowly ಎಲ್ಲಾ institutions ಹೋಗಿ ನಿಮ್ಮ ಕೈಯಲ್ಲಿ ನಿಮ್ಮ ಮೆಡಿಕಲ್ ಕಾಲೇಜುಗಳು ಮಾತ್ರ ಉಳಿಯುತ್ತವೆ. ಕೊನೆಗೆ ಮುನಿಸಿಪಾಲಿಟಿ, ಕಾರ್ಪೋರೇಷನ್‌ನ Schools, High Schools and Colleges ಗತಿಯಾಗಿರುವ ಸ್ಥಿತಿಗೆ ನಾವು ಬಂದು ತಲುಪುತ್ತೇವೆ. ಆಮೇಲೆ ಮೆರಿಟ್ ವಿದ್ಯಾರ್ಥಿಗಳು ಕೂಡ ದೊಡ್ಡ ದೊಡ್ಡ institutions ಕಡೆ ಬಾಯಿ ಬಡಿದುಕೊಳ್ಳುವಂಥ ಸ್ಥಿತಿ ಬರುತ್ತದೆ. ಅದಕ್ಕೆ ದಯವಿಟ್ಟು ಇದರ ಬಗ್ಗೆ ನಾವೆಲ್ಲರೂ ನಿಜವಾಗಲೂ ಯೋಚಿಸುವ ಅವಶ್ಯಕತೆಯಿದೆ. ತಾವು ಗಂಭೀರವಾಗಿ ಯೋಚನೆ ಮಾಡಿ, Ad hoc basis ಮೇಲೆ, ಪ್ರತಿ ವರ್ಷ ನಿಮ್ಮದೇ ಆದಂಥ ಒಂದು arrangement, ನಮ್ಮದೇ ಒಂದು arrangement, ಮುಂದೆ ಬರುವವರದೇ ಒಂದು arrangement ಎಂದರೆ ಇದು ಒಂದು ರೀತಿಯಲ್ಲಿ ತೂಗುವ ಕತ್ತಿ ಇದ್ದ ಹಾಗೆ. ಮೊನ್ನೆ ನಮ್ಮ ಚೆಲುವರಾಯಸ್ವಾಮಿಯವರು Contract carriages withdraw ಮಾಡಿಕೊಳ್ಳುತ್ತೇವೆಂದು ಹೇಳಿದ ತಕ್ಷಣ ಎಲ್ಲಾ ಕಡೆ ಒಂದು message electrify ಆಯಿತು. ಹಾಗಾದಾಗ ತಕ್ಷಣ ನಮ್ಮನ್ನು ಎಲ್ಲಾದರೂ stop ಮಾಡುತ್ತಾರೇನೋ, cancel ಮಾಡುತ್ತಾರೇನೋ ಎಂದು Contract carriages ನವರು ಈಗ meeting ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಹೊಸ ಮೆಡಿಕಲ್ ಕಾಲೇಜುಗಳು ಬಂದ ತಕ್ಷಣವೇ ಎಲ್ಲಾ private medical colleges ನವರು meeting ಮಾಡಲಿಕ್ಕೆ ಶುರು ಮಾಡುತ್ತಾರೆ. ಆಗ ನಿಮ್ಮ ಮೇಲೆ ವೈಯಕ್ತಿಕವಾಗಿ influence ಬೀರದೇ ಇರಬಹುದು. ಆದರೆ ಯಾವ ಪಕ್ಷ ಆಡಳಿತ ನಡೆಸುತ್ತದೆ, ಆ ಪಕ್ಷದಲ್ಲಿಯೂ ಕೂಡ influence ಬೀರುವಂತಹ ವ್ಯಕ್ತಿಗಳು, ಸಂಘ ಸಂಸ್ಥೆಗಳು ಇರುತ್ತವೆ. ಇದನ್ನು ನಾವು ಯಾರೂ ಕೂಡ ಅಲ್ಲಗೆಳೆಯಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್:- influence ಬೀರುತ್ತಾರೆ ಎಂದರೆ ಏನು? ತಾವು ಅದನ್ನು ಬಿಡಿಸಿ ಹೇಳಬೇಕು. ಅವರಿಗೆ ಅರ್ಥವಾಗಬಹುದು, ನಮಗೆ ಅರ್ಥವಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ:- Infiuence ಬೀರುತ್ತಾರೆಂದರೆ, ಕೊನೆಗೆ autonomous ಮತ್ತು independent ಸಂಸ್ಥೆಗಳು exploit

ಮಾಡುವುದಲ್ಲದೆ ಅವರ ಮೂಲಕ ನಾವು ಹಣ ಕೊಟ್ಟು ಬಂದಿದ್ದೇವೆ, ಹಣ ಕೊಟ್ಟು ಅವರನ್ನು ಈ ವರ್ಷ ಮುಂದುವರೆಸುತ್ತಿದ್ದೇವೆ ಅಥವಾ ನಮಗೆ ಇಷ್ಟು ಸೀಟುಗಳನ್ನು ಬಿಟ್ಟುಕೊಡುತ್ತೇವೆಂದು ಹೇಳಿದ್ದೇವೆ ಎನ್ನತಕ್ಕಂಥ ಅಭಿಪ್ರಾಯಗಳು ಬರುತ್ತವೆ. ಅದನ್ನು ತಪ್ಪಿಸುವುದಕ್ಕಿಂತಲೂ ನನ್ನ ಇಚ್ಛೆಯೇನೆಂದರೆ ಇದು regulate ಮಾಡುವುದು ಬಹಳ ಮುಖ್ಯ, ಎಲ್ಲರಿಗೂ ಅನುಕೂಲ ಮಾಡುವಂಥ ರೀತಿಯಲ್ಲಿ ಕಾನೂನು ತರುವುದು ಸಹ ಬಹಳ ಮುಖ್ಯವಾಗಿದೆ. ಅದರಲ್ಲಿ ನಾವು interest ಇದ್ದೇವೆ ಹೊರತಾಗಿ ಒಬ್ಬರ ಮೇಲೆ ಒಬ್ಬರು blame ಮಾಡಿ ನೀವಿಷ್ಟು allot ಮಾಡಿದ್ದೀರಿ, ಏಕೆಂದರೆ ನಿಮ್ಮಲ್ಲಿ ಒಂದು ಪಟ್ಟಿ ಇರುವವರೆಗೆ. 200 seats ನೀವು ಕೊಟ್ಟಿರಿ, ಯಾವುದೋ land ಬಂದರೆ ಅದರಲ್ಲಿ ನಿಮ್ಮದು 20 ಎಕರೆ ಇತ್ತು ಎನ್ನುವುದು, ನೀವೇನು ಒಳ್ಳೆಯದನ್ನು ಮಾಡುವಿರಿ ಅದರ ಬಗ್ಗೆ ಎಂದಿಗೂ ಹೇಳುವುದಿಲ್ಲ.

ನೀವು ಏನು ಒಳ್ಳೆಯದು ಮಾಡುತ್ತೀರಿ ಅದನ್ನು ಎಂದೂ ಹೇಳಿಲ್ಲ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಚಿಂತನೆ ಮಾಡಿ ಒಂದು ಸಮಗ್ರವಾದ ಕಾನೂನನ್ನು ತರಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಮೆರಿಟ್ ವಿದ್ಯಾರ್ಥಿಗಳ Fee ನ್ನು ಕಡಿಮೆ ಮಾಡತಕ್ಕದ್ದನ್ನು ತಕ್ಷಣ ಮಾಡಬೇಕು. ಎಸ್.ಸಿ.,ಎಸ್.ಟಿ., backward ವಿದ್ಯಾರ್ಥಿಗಳ Feeನ್ನು immediately remit ಮಾಡಬೇಕು.

ಶ್ರೀ ಜಿ.ಎಸ್. ತಿಪ್ಪಾರೆಡ್ಡಿ (ಚಿತ್ರದುರ್ಗ):- ನಮ್ಮ ಚಿತ್ರದುರ್ಗದಲ್ಲಿ ಸುಮಾರು ಕಾಲೇಜುಗಳಿವೆ. ಹಲವಾರು ಜನರು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಮಾತನಾಡಿದರು. ನಮ್ಮಲ್ಲಿ ನರ್ಸಿಂಗ್, ಐ.ಟಿ.ಐ, ಡಿಪ್ಲೋಮಾ, ಬಿ.ಎಡ್. ಕಾಲೇಜುಗಳು ಸುಮಾರು 20-30 ಇದೆ. ಸರ್ಕಾರದಿಂದ, ಸಮಾಜ ಕಲ್ಯಾಣ ಇಲಾಖೆಯಿಂದ ಮೆರಿಟ್ ಸೀಟನ್ನು ಏನು ಅಲಾಟ್ ಮಾಡುತ್ತಾರೆ, ನಮ್ಮಲ್ಲಿ ಏನು ಮಾಡುತ್ತಾರೆಂದರೆ, ಆ ಬಡ ಮಕ್ಕಳು ಬಂದರೆ ವಿಶೇಷವಾಗಿ ನಮ್ಮ ಜಿಲ್ಲೆಯ ಬಹಳ ಜನ ನರ್ಸಿಂಗ್, ಐ.ಟಿ,ಐ. ಗೆ ಹೋಗುತ್ತಾರೆ. ಅದು ಎಲ್ಲರಿಗೂ ಸಂಬಂಧಪಟ್ಟ ವಿಚಾರ. ಇದು ನಿಮಗೆ ಬಾರದಿದ್ದರೂ ಕೂಡ ಜನರಲ್ ಆಗಿ ಹೇಳುತ್ತಿದ್ದೇನೆ. ಈ ಬಿಲ್ಲಿನ ವಿಚಾರಕ್ಕೂ ಇದಕ್ಕೂ ಸಂಬಂಧವಿಲ್ಲ. ಇವರೇನು ಸೀಟನ್ನು ಅಲಾಟ್ ಮಾಡುತ್ತಾರೆ,

ಅದಕ್ಕೆ ಫೀಸ್ ಇಷ್ಟು ಎಂದು ಇರುತ್ತದೆ. ನಮ್ಮಲ್ಲಿ ಏನು ಮಾಡುತ್ತಾರೆಂದರೆ, ನಿನಗೆ Government seat ಎಂದು building fund ಇಷ್ಟು bus fund, dress fund ಇಷ್ಟು ಎಂದು ಸುಮಾರು 30–40 ಸಾವಿರದವರಗೆ ಅವರಿಗೆ demand ಮಾಡುತ್ತಾರೆ. ಅವರು ಅದನ್ನು ಕಟ್ಟಲು ಆಗದೆಯೇ ನಾಳೆ ಬರುತ್ತೇವೆ, ನಾಡಿದ್ದು ಬರುತ್ತೇವೆ, 20 ಸಾವಿರ 30 ಸಾವಿರ ತೆಗೆದುಕೊಳ್ಳಿ ಎಂದು ಮೂರು ನಾಲ್ಕು ದಿವಸ ಬಿಟ್ಟು ಬಂದ ಮೇಲೆ, ನಮಗೆ time ಆಗಿ ಹೋಯಿತು ಎಂದು ಆ ಸೀಟನ್ನು ಬೇರೆಯವರೆಗೆ ಮಾರುವಂಥ ವ್ಯವಸ್ಥೆ ನಮ್ಮಲ್ಲಿ ನಡೆಯುತ್ತಿದೆ. ಇವತ್ತು ಟಿ.ವಿ.ಯಲ್ಲಿ ಕೂಡ ಚಿತ್ರದುರ್ಗದಲ್ಲಿರುವ ಎಲ್ಲಾ ಕಾಲೇಜುಗಳಲ್ಲಿ ಕೇವಲ ಕೇರಳದವರಿಗೆ ಮಾತ್ರ ಕೊಡುತ್ತಾರೆ, ಸ್ಥಳೀಯರಿಗೆ ಕೊಡುವುದಿಲ್ಲವೆಂದು ಸುದ್ದಿ ಬಂತು. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಸಹ ಮುಂದೆ ಅಲಾಟ್‌ಮೆಂಟ್ ಮಾಡಬೇಕಾದರೆ ಯಾರು ಸೀಟು ಕೊಡುವುದಿಲ್ಲ ಅಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟು ಅವರ ಮೇಲೆ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್(ಸೇಡಂ):– ಮಾನ್ಯ ಸಚಿವರು ಈ ಕಡೆ ಸ್ವಲ್ಪ ಗಮನ ಕೊಡಬೇಕು. ಈ ಬಿಲ್ಲನ್ನು ತಂದಿರುವುದು ಒಳ್ಳೆಯ ಉದ್ದೇಶ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ತಾವು ಇದರಲ್ಲಿ ಏನು ಕೆಲವು ವಿಷಯಗಳನ್ನು ಅಳವಡಿಸಿಕೊಳ್ಳಬೇಕು. ತಮಗೆ ಗೊತ್ತಿರುವಂತೆ ಕಳೆದ ಸಲ ಸಿ.ಇ.ಟಿ. ಯಲ್ಲಿ ಪ್ರೊಫೆಶನಲ್ ಕೋರ್ಸ್‌ನಲ್ಲಿ especially post-graduate and under-graduate coursesನಲ್ಲಿ ಏನಾಗುತ್ತಿದೆ ಎಂದರೆ, ಇವತ್ತು ಕಾಮೆಡ್–ಕೆ ಎಂಬುದು ಅವರೇ ಒಂದು ಪರೀಕ್ಷೆಯನ್ನು ಮಾಡುತ್ತಾರೆ. ಅದರಲ್ಲಿ ಪಾರದರ್ಶಕತೆ ಇಲ್ಲ. ಇದು ಬಹಳ ಗಂಭೀರವಾಗಿರತಕ್ಕ ವಿಷಯ. ನಮ್ಮ ರಾಜ್ಯದಲ್ಲಿ ಇವತ್ತು ಹಣ ಕೊಡುವುದಕ್ಕೆ ತಯಾರಾಗಿರುವ ವಿದ್ಯಾರ್ಥಿಗಳು ಅವರದ್ದು ಕೂಡ ಮೆರಿಟ್ ಆಧಾರದ ಮೇಲೆ ಆಗಬೇಕಾಗಿರುವುದು ಸುಪ್ರೀಂ ಕೋರ್ಟಿನ ತೀರ್ಮಾನ. ನನ್ನ ಸಲಹೆ ಏನೆಂದರೆ, ಮೊನ್ನೆ ಇದಕ್ಕೆ ತಿದ್ದುಪಡಿ ತಂದು ಇವತ್ತು ಸಿ.ಇ.ಟಿ.ಯಲ್ಲಿ ಏನು ತಾವು conduct ಮಾಡುತ್ತೀರಿ. It is very transparent, and we welcome it. ಆ ರೀತಿ ಇರಬೇಕು. ಅದೇ ಒಂದು ಮಾನದಂಡವನ್ನು ನೀವು payment

seatsಗೂ ಮಾಡಿಬಿಡಿ. ಕಾಮೆಡ್-ಕೆ ಯವರು ಪ್ರತ್ಯೇಕವಾಗಿ ಪರೀಕ್ಷೆ ಮಾಡಲು ಅವಕಾಶವೇ ಕೊಡಬೇಡಿ. ಏಕೆಂದರೆ ಅದು ಪಾರದರ್ಶಕವಾಗಿಲ್ಲ, ಕಾಮೆಡ್-ಕೆ ಪರೀಕ್ಷೆಯಾದ ಮೇಲೆ ಮಾನ್ಯ ಸಚಿವರು ಏಕೆ ಇದನ್ನು ಗಮನಿಸಿಲ್ಲ ಎಂಬುದು ಗೊತ್ತಿಲ್ಲ. ಏಕೆಂದರೆ ಅವರು listನ್ನು ಹಾಕುವುದೇ ಇಲ್ಲ. ಬೇಕಾದರೆ ನೀವು internet ನಲ್ಲಿ ನೋಡಿ. internet ನಲ್ಲಿ ನಂಬರ್ಸ್ ಎಷ್ಟಿರುತ್ತದೆಯೋ ಅಷ್ಟಕ್ಕೆ ಮಾತ್ರ ನಿಮ್ಮ ranking ಸಿಗುತ್ತದೆ. ಆದರೆ entire state rankingನ್ನು ಅವರು ಎಲ್ಲಾ ಪ್ರಕಟಗೊಳಿಸಿಲ್ಲ. ಇದನ್ನು ನೀವು ಗಮನಹರಿಸಿಲ್ಲ. ಪ್ರತಿನಿತ್ಯ ನಾವು ಪೇಪರ್‌ಗಳಲ್ಲಿ ನೋಡುತ್ತೇವೆ. ಆ ಸೀಟನ್ನು ಬೇರೆಯವರಿಗೆ ಕಾಯ್ದಿರಿಸಿ ಹಣಕ್ಕೆ ಮಾರಿಕೊಳ್ಳುತ್ತಿದ್ದಾರೆ. ಅದರ ಮೇಲೆ ನಿಮಗೆ ನಿಯಂತ್ರಣ ಇಲ್ಲ. ಅದನ್ನು ನಿಯಂತ್ರಣ ಮಾಡಲು ಇವತ್ತು ನೀವು ಏನು ತಂದಿದ್ದೀರಿ? ಮಾನ್ಯ ಖರ್ಗೆಯವರು ಹೇಳಿದಂತೆ ಫೀ ಕಡಿಮೆ ಮಾಡತಕ್ಕದ್ದು ಬಹಳ ಪ್ರಮುಖ ವಿಷಯ. ಅನಂತರ ಇವತ್ತು Payment seat ನಲ್ಲಿ ಏನಾದರೂ ಪಾರದರ್ಶಕತೆ ತಾರದಿದ್ದರೆ ಇವತ್ತು ಖಾಸಗಿ ಕಾಲೇಜುಗಳವರು ಅವರಿಗೆ ಮನಸ್ಸಿಗೆ ಬಂದಂತೆ ಕೊಡುವ ವ್ಯವಸ್ಥೆಯಾಗುತ್ತದೆ. ಏಕೆಂದರೆ ಅದರಲ್ಲಿ ಪಾರದರ್ಶಕತೆ ಇಲ್ಲ. ಕಾಮೆಡ್-ಕೆ Functioningಗೇ ನೀವು ನಿಯಂತ್ರಣ ಮಾಡಬೇಕು. ಕಾಮೆಡ್-ಕೆ ಅವಶ್ಯಕತೆಯೇ ಇಲ್ಲ. ನೀವು ಸಿ.ಇ.ಟಿ.ಏನು under-graduate and post-graduate ಮಾಡುತ್ತೀರಿ ಅದರ ಆಧಾರದ ಮೇಲೆ ಕೌನ್ಸಲಿಂಗ್ ಆಗಲಿ. ಇದರಲ್ಲಿ ತಪ್ಪೇನಿದೆ? ನೀವು ಕಾಮೆಡ್-ಕೆಗೆ ಪ್ರತ್ಯೇಕ್ಷವಾಗಿ ಅವಕಾಶ ಕೊಟ್ಟಿದ್ದರಿಂದ ಅಲ್ಲಿ ಅವ್ಯವಹಾರ ನಡೆಯುತ್ತಿದೆ, ಅಲ್ಲಿ ಪಾರದರ್ಶಕತೆ ಇಲ್ಲ. ಅವರಿಗೆ ಬೇಕಾಗಿರುವವರಿಗೆ ಸೀಟನ್ನು ಕೊಡುತ್ತಿದ್ದಾರೆ. ಮತ್ತು ಹೊರ ರಾಜ್ಯದ ವಿದ್ಯಾರ್ಥಿಗಳೇ ಅಲ್ಲಿ major ಆಗಿ eligible ಆಗುತ್ತಿದ್ದಾರೆ. ಅವರಿಗೇ ಜಾಸ್ತಿ ಸೀಟುಗಳು ಸಿಗುತ್ತಿದೆ. ಇವತ್ತು ನಮ್ಮ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ನಾನು ಸಚಿವರಲ್ಲಿ ಒತ್ತಾಯ ಮಾಡುವುದೇನೆಂದರೆ ಈ ತಿದ್ದುಪಡಿಯನ್ನು ನೀವು ಖಂಡಿತವಾಗಿ in the interest of the students of the state, ಸಿ.ಇ.ಟಿ. ಮೂಲಕವೇ ಇವತ್ತು payment seat ನ್ನು ವಿರತಣೆ ಮಾಡತಕ್ಕದ್ದು ಖಂಡಿತವಾಗಿ ತಾವು ತರಬೇಕು ಎಂದು ನಾನು ಮನವಿ ಮಾಡುತ್ತೇನೆ.

ಶ್ರೀ ಐವಾನ್ ನಿಗ್ಲಿ (ನಾಮಾಂಕಿತ):- Anglo-Indian community ಗೆ ಪ್ರತಿ ವರ್ಷ ಒಂದು ಮೆಡಿಕಲ್ ಸೀಟ್ ಎರಡು ಇಂಜಿನಿಯರಿಂಗ್ ಸೀಟು ಇದೆ. ಇದು ಬಿಟ್ಟು ಬೇರೆ ಯಾವುದೂ ಕೊಡುತ್ತಿಲ್ಲ. ಈಗ ಈ community ಯಲ್ಲಿ ಜಾಸ್ತಿ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಆದ್ದರಿಂದ Anglo-Indian communityಗೆ ಮೆಡಿಕಲ್‌ನಲ್ಲಿ ಒಂದು ಸೀಟಿನ ಬದಲು ಎರಡು ಸೀಟನ್ನು, ಇಂಜಿನಿಯರಿಂಗ್‌ನಲ್ಲಿ ಈಗ ಏನು ಎರಡು ಸೀಟು ಇದೆ, ಅದರ ಬದಲು ಕನಿಷ್ಟ ಮೂರು ಸೀಟನ್ನು ಕೊಡಬೇಕು. ಮೆಕ್ಯಾನಿಕಲ್ ಒಂದು, ಟೆಲಿಕಮ್ಯೂನಿಕೇಷನ್ ಒಂದು ಇದೆ. ಇದರ ಜೊತೆಗೆ ಐ.ಟಿ. ಸೆಕ್ಟಾರ್‌ನಲ್ಲಿ ಒಂದು ಸೀಟನ್ನು ಕೊಡಬೇಕು. ನಮಗೆ ಡೆಂಟಲ್ನಲ್ಲಿ ಒಂದೂ ಸೀಟ್ ಇಲ್ಲ. ಆದ್ದರಿಂದ ಕನಿಷ್ಟ ಎರಡು ಸೀಟ್ ಅನ್ನು ಡೆಂಟಲ್‌ನಲ್ಲಿ ಕೊಡಬೇಕು. ನರ್ಸಿಂಗ್‌ನಲ್ಲಿ ಎರಡು ಸೀಟನ್ನು ಕೊಡಬೇಕು ಎಂ.ಬಿ.ಎ.ನಲ್ಲಿ ಎರಡು ಸೀಟು ಕೊಡಬೇಕು. ಏಕೆಂದರೆ Anglo-Indian communityಯವರು ತುಂಬ ಬಡ ಮಕ್ಕಳು ಇದ್ದಾರೆ.

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, ಬಹಳ ಗೌರವಾನ್ವಿತ ವಿರೋಧ ಪಕ್ಷದ ನಾಯಕರನ್ನು ಒಳಗೊಂಡು ಎಲ್ಲರೂ ಬಹಳ ಉನ್ನತ ಮಟ್ಟದ ಸಲಹೆಗಳನ್ನು ಕೊಟ್ಟಿದ್ದಾರೆ. ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಒಂದೆರಡು ವಿಷಯಗಳನ್ನು ಮಾತ್ರ ನಾನು ಇಲ್ಲಿ ಹೇಳಲು ಇಷ್ಟ ಪಡುತ್ತೇನೆ. ಇದರ ಪೂರ್ತಿ ಚರಿತ್ರೆ ಎಲ್ಲರಿಗೂ ಗೊತ್ತಿರುವುದೇ. ಇನಾಂದಾರ್ ಮತ್ತು ಇತರರ ವಿರುದ್ಧ ಮಹಾರಾಷ್ಟ್ರದಲ್ಲಿ ನಡೆದಂಥ ಕೇಸು ಇಡೀ ದೇಶಕ್ಕೆ ಅನ್ವಯಿಸುತ್ತದೆ. ಆ judgment ಬಂದ ಮೇಲೆ ರಾಜ್ಯದಲ್ಲಿ ಇರತಕ್ಕ unaided ವೃತ್ತಿಶಿಕ್ಷಣ institutionನಲ್ಲಿ ಸರ್ಕಾರಕ್ಕೆ ಯಾವುದೇ ರೀತಿಯ ಅಧಿಕಾರ ಇಲ್ಲ ಎಂದು ತೀರ್ಮಾನವಾಯಿತು. ಇನಾಂದಾರ್ judgment ನಿಂದ ನಮ್ಮ ರಾಜ್ಯದ ಮಕ್ಕಳಿಗೆ ಬಹಳ ಅನ್ಯಾಯವಾಯಿತು. ಆದಾದ ಮೇಲೆ ನಾವು ಒತ್ತಾಯ ಮಾಡಿದ ಮೇಲೆ ಕೇಂದ್ರದಲ್ಲಿ 93rd amendment ಮಾಡಿದ ಮೇಲೆ ನಮಗೆ ಸ್ವಲ್ಪ ಉಸಿರಾಡಲು ಅವಕಾಶ ಸಿಕ್ಕಿತು. ಅದರ ಹಿನ್ನೆಲೆಯಲ್ಲಿ ನಾನು 2006ರ ಏಪ್ರಿಲ್‌ನಲ್ಲಿ ಒಂದು ಬಿಲ್ಲನ್ನು ಮಾಡಿ, ತಾವೆಲ್ಲ ಅದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ. ಆ ಬಿಲ್ಲಿನ ಪ್ರಕಾರ

ನಾವು ಸ್ವಲ್ಪ ಅಧಿಕಾರ ತೆಗೆದುಕೊಳ್ಳುವ ಪ್ರಯತ್ನ ಮಾಡಿದೆವು. ಪೂರ್ಣ ಅಧಿಕಾರವಲ್ಲ, ಪೂರ್ಣ ಸಿಗುತ್ತಲೂ ಇರಲಿಲ್ಲ, ಅದು ಸಾಧ್ಯವೂ ಇರಲಿಲ್ಲ. ಆದರೆ ಇನಾಂದಾರ್ judgment ನಲ್ಲಿ ಒಂದು clause ಇತ್ತು. ಸುಪ್ರೀಂ ಕೋರ್ಟ್ ಹೇಳಿತ್ತು. Private unaided institutions ನವರು ಮತ್ತು ಸರ್ಕಾರದವರು ಮಾತುಕತೆಯ ಮೂಲಕ ಏನು ಬೇಕಾದರೂ ತೀರ್ಮಾನ ಮಾಡಿಕೊಳ್ಳಬಹುದು ಎಂದು ಒಂದು clause ಇತ್ತು. ಕಳೆದ ವರ್ಷ ಅದರ ಲಾಭ ತೆಗೆದುಕೊಂಡು Private unaided institutions ಜೊತೆ ಮಾತುಕತೆ ನಡೆಸಿ ನಾವು ಸೀಟುಗಳನ್ನು ವಿಲೇವಾರಿ ಮಾಡಿಕೊಂಡೆವು. ಅವರು ಅದಕ್ಕೆ ಒಪ್ಪಬಹುದಾಗಿತ್ತು. ಇಲ್ಲವೇ ಒಪ್ಪದೆಯೂ ಇರಬಹುದಾಗಿತ್ತು. ಆದರೆ ಅವರು ಅದನ್ನು ಒಪ್ಪಿದರು. ಆ ರೀತಿ ನಮ್ಮ ಮಾತುಕತೆಯಲ್ಲಿ ಒಪ್ಪಿದ ಹಿನ್ನೆಲೆಯಲ್ಲಿ ಕಳೆದ ವರ್ಷ ನಾವು ಇಂಜಿನಿಯರಿಂಗ್‌ನಲ್ಲಿ ಕಡಿಮೆ ಫೀ ಸೀಟಿಗೆ ಕರ್ನಾಟಕದಲ್ಲಿ ಒಂದು ಪ್ರತೀತಿ ಇದೆ. ಅದಕ್ಕೆ free seat ಎಂದು ಕರೆಯುತ್ತೇವೆ. free ಅಂದರೆ total free ಎಂದು ಅಲ್ಲ. Literal meaning ಅಲ್ಲ. ಅದರ ಹಿಂದಿನ ವರ್ಷ ಇಂಜಿನಿಯರಿಂಗ್‌ನಲ್ಲಿ ನಮ್ಮ ರಾಜ್ಯದ ಮಕ್ಕಳಿಗೆ ಹತ್ತು ಸಾವಿರ ಸೀಟುಗಳು ಸಿಗುತ್ತಿತ್ತು. ಕಳೆದ ವರ್ಷ ನಮ್ಮ ಅವರ ಮಾತುಕತೆಯ ಮೂಲಕ 20 ಸಾವಿರ free seat ಗಳನ್ನು ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾದೆವು. ಆದರೆ 20 ಸಾವಿರ ತೆಗೆದುಕೊಂಡ ಮೇಲೂ Higher fee structure ನ್ನು ನಾವು ಹಾಗೆಯೇ ಇಟ್ಟಿದ್ದೇವೆ. ಆ ಒಪ್ಪಂದ ಆದ ಮೇಲೆ ನಾವು ಏನು ಇಲ್ಲಿ ಒಂದು ಬಿಲ್ಲನ್ನು ಪಾಸ್ ಮಾಡಿದ್ದೆವೂ ಅದು ಹಾಗೆಯೇ ಇದ್ದರೆ ಈ ಒಪ್ಪಂದಕ್ಕೆ ಅರ್ಥ ಇಲ್ಲದಂತೆ ಆಗುತ್ತಿತ್ತು. ಆದ್ದರಿಂದ ಏಪ್ರಿಲ್, 2006 ರಲ್ಲಿ ಮಾಡಿದ್ದ ಬಿಲ್ಲನ್ನು ಒಂದು ವರ್ಷದ ಮಟ್ಟಿಗೆ ತಡೆದು ಈಗ ಏನು ಒಪ್ಪಂದ ಮಾಡಿಕೊಂಡಿದ್ದೇವೆ ಅದರಂತೆಯೇ ನಡೆಸುತ್ತೇವೆ ಎಂದು ಸದನದ ಮುಂದೆ ತಂದಾಗ, ತಾವು ಇವತ್ತು ಏನು suggestion ಕೊಟ್ಟಿರಿ ಇದು ಮತ್ತು ಇನ್ನು ಕೆಲವು suggestion ಮೂಲಕ ಒಪ್ಪಿಗೆ ಕೊಟ್ಟಿದ್ದೀರಿ. ಆದಾದ ಮೇಲೆ ಅದು ಚೆನ್ನಾಗಿ ನಡೆದುಕೊಂಡು ಬಂತು. ಈ ವರ್ಷ private unaided institutions ಜೊತೆ ಮಾತುಕತೆಯ ಮೂಲಕ free seats ಸಂಖ್ಯೆಯನ್ನು 26,500ಕ್ಕೆ ಏರಿಸಿದ್ದೇವೆ. ಅವರಿಂದ ಸ್ವಲ್ಪ ಜಾಸ್ತಿ ಸೀಟುಗಳನ್ನು ತೆಗೆದುಕೊಳ್ಳುವುದರಲ್ಲಿ

ಸ್ವಲ್ಪ ಸಮಯ ಸಿಕ್ಕಿತು. ಮಾತುಕತೆಯ ಮೂಲಕ ಅದನ್ನು ಮಾಡಿದ್ದೇವೆ. ಈ ರೀತಿ ನಮ್ಮ ಮಕ್ಕಳಿಗೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಎರಡರಲ್ಲೂ free seats ಸಂಖ್ಯೆಯನ್ನು ಜಾಸ್ತಿ ಮಾಡಿದ್ದೇವೆ. ಹೋದ ವರ್ಷಕ್ಕಿಂತ improvement ಮಾಡಿದ್ದೇವೆ. Original Billನಲ್ಲಿ ಒಂದು ವರ್ಷಕ್ಕೆ ಮಾತ್ರ ತಮ್ಮಿಂದ ಒಪ್ಪಿಗೆ ತೆಗೆದುಕೊಂಡಿದ್ದೆವು. ಏಕೆ ಇದು ಒಂದೊಂದು ವರ್ಷ? ವರ್ಷ ವರ್ಷ ಏಕೆ ತರುತ್ತೀರಿ? ಒಟ್ಟಿಗೆ ಏನಾದರೂ ಮಾಡಬಾರದೇ ಎಂದು ಕೇಳುತ್ತೀರಿ. ಸಮಗ್ರ ಶಿಕ್ಷಣ ಮಸೂದೆ ಕೇಂದ್ರದಿಂದ ಬರಬಹುದು, ಅದು ಬಂದರೆ ನಮಗೆ ಇನಾಂದಾರ್ judgment ನಿಂದ ಆಗಿರುವ ತೊಂದರೆ ಪೂರ್ತಿ ಪರಿಹಾರ ಆಗಬಹುದು ಎಂಬ ಹಿನ್ನೆಲೆಯಲ್ಲಿ ಒಂದೊಂದು ವರ್ಷಕ್ಕೆ ಮಾಡಿಕೊಂಡು ಬಂದಿದ್ದೇವೆ. ಹೋದ ವರ್ಷ ಸಹ ಇದನ್ನು ಮೂರು ವರ್ಷಕ್ಕೆ ಮಾಡಿ ಎಂದು ಬೇಡಿಕೆ ಬಂತು. ಈ ವರ್ಷ ಸಹ ಈ ಒಪ್ಪಂದವನ್ನು ಮೂರು ಇಲ್ಲವೇ ಐದು ವರ್ಷಕ್ಕೆ ಏಕೆ ಮಾಡಿಕೊಳ್ಳುವುದಿಲ್ಲ? ಒಟ್ಟಿಗೆ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಆದರೆ ಕೇಂದ್ರದಿಂದ ಸಮಗ್ರ ಶಿಕ್ಷಣ ಮಸೂದೆ ಪಾಸ್ ಆಗಿ ಬಂದರೆ ನಮ್ಮ ರಾಜ್ಯದ ಮಕ್ಕಳಿಗೆ ಇನ್ನಷ್ಟು ಅನುಕೂಲ ಆಗಬಹುದು, ಇವತ್ತು ಏನು ಸೀಮಿತ ವ್ಯಾಪ್ತಿ ಇದೆ ಅದರ ಅಡಿಯಲ್ಲಿ ಏನೇನು ಅನುಕೂಲ ಮಾಡಿಕೊಡಬಹುದೋ ಅದನ್ನು ಮಾಡಿಕೊಟ್ಟಿದ್ದೇವೆ. ವಿಧಾನ ಮಂಡಲದಲ್ಲಿ Original Bill 2006ರ ಏಪ್ರಿಲ್‌ನಲ್ಲಿ ಏನು ಇತ್ತು ಅದನ್ನು ಇನ್ನು ಒಂದು ವರ್ಷ ತಡೆದು ನೋಡೋಣ, ಸಮಗ್ರವಾಗಿ ಶಿಕ್ಷಣ ಮಸೂದೆ ಏನಾದರು ಬಂದರೆ, ಲಾಭವಾಗಬಹುದು, ಇಲ್ಲದಿದ್ದರೆ ಬೇರೆ ದಾರಿ ಇರುವುದಿಲ್ಲ, ಮುಂದಿನ ವರ್ಷ ತಮ್ಮೆಲ್ಲರ ಸಲಹೆಯ ಆಧಾರದ ಮೇಲೆ ಇದನ್ನೆಲ್ಲ ಅಳವಡಿಸಿಕೊಂಡು ನಮ್ಮ ರಾಜ್ಯದ ಮಕ್ಕಳಿಗೆ ಮತ್ತಷ್ಟು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ನಾವು ಏನು ಮಾಡಿಕೊಡಬಹುದೋ ಅದನ್ನೆಲ್ಲಾ ಮಾಡೋಣ. ಖಂಡಿತ ಮಾಡುತ್ತೇವೆ. ದಯವಿಟ್ಟು ಇದನ್ನು ಒಂದು ವರ್ಷದ ಮಟ್ಟಿಗೆ ತಡೆಹಿಡಿಯಲು ಅನುಮತಿ ಕೊಟ್ಟಿದ್ದೀರಿ, ಅದನ್ನು ಇನ್ನೊಂದು ವರ್ಷಕ್ಕೆ ತಡೆಹಿಡಿಯುವುದಕ್ಕೆ ಅನುಮತಿಯನ್ನು ತಾವು ಕೊಡಿ ಎಂದು ಮಾನ್ಯ ಅಧ್ಯಕ್ಷರನ್ನು ಕೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2007ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 9ರವರೆಗೆ

ಅಧ್ಯಕ್ಷರು: "ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಎಚ್. ಶಂಕರ ಮೂರ್ತಿ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, "2007 ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು" ಅಂಗಿಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2007ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು" ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ–1)

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ಅ) ವಿಷಯ: ಗುಲ್ಬರ್ಗದಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇವತ್ತು ವೃತ್ತಿ ಶಿಕ್ಷಣ ಬಿಲ್ಲು ಇದೆಯೆಂದು ಸಚಿವರಾದ ಶಂಕರಮೂರ್ತಿಯವರು ಇಲ್ಲಿಗೆ ಬಂದಿದ್ದಾರೆ! ಗುಲ್ಬರ್ಗಾದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಆಗಲೇಬೇಕು. ಅದಕ್ಕಾಗಿ ಬಹಳಷ್ಟು ಕಡೆ ಗುಲ್ಬರ್ಗಾದಲ್ಲಿ ಉಪವಾಸ ಸತ್ಯಾಗ್ರಹವನ್ನು ಎಲ್ಲಾ ಪ್ರೊಫೆಸರ್‌ಗಳು ಮಾಡುತ್ತಿದ್ದಾರೆ. ನಂಜುಡಪ್ಪನವರ ವರದಿಯ ಪ್ರಕಾರ ಕೂಡ, ನಿನ್ನೆ ನಮ್ಮ ಪ್ರಕಾಶ್‌ರವರು ಅಲ್ಲಿಗೆ ಹೋಗಿದ್ದಾಗ, they have all represented. ಅದಕ್ಕೆ ಅವರು ಇವತ್ತು ಬಂದಿದ್ದಾರೆ ಮತ್ತು ವಿಧಾನ ಪರಿಷತ್ತಿನಲ್ಲಿ ತಾವು ಹೇಳಿಕೆಯನ್ನು ಕೊಟ್ಟಿದ್ದೀರಿ. ಇವತ್ತು ಗುಲ್ಬರ್ಗಾ ಹಿಂದುಳಿದ ಪ್ರದೇಶ. ಆ ಭಾಗದಲ್ಲಿ Central University ಆಗತಕ್ಕ ಬಗ್ಗೆ ನಿಯೋಗ ಹೋಗುವುದಾಗಲೀ ಅಥವಾ ಕೇಂದ್ರದ ಅರ್ಜುನ್‌ಸಿಂಗ್‌ರವರಿಗೆ ಪತ್ರವನ್ನು ಸರ್ಕಾರ ಬರೆಯಬೇಕು ಎಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನಂಜುಡಪ್ಪ ವರದಿಯಲ್ಲಿ specific ಆಗಿ ಒಂದು central university ಗುಲ್ಬರ್ಗಾದಲ್ಲೇ ಆಗಬೇಕೆಂದು ಹೇಳಿದ್ದಾರೆ. ಆ ರೀತಿ ಒಂದು specific recommendation ಇದ್ದಾಗಲೂ ಸಹ ಯಾರೋ ಒಬ್ಬರು ಅಧಿಕಾರಿ "ಇಲ್ಲ, ನಾವು ಮೈಸೂರಿನಲ್ಲಿ ಮಾಡಿಬಿಟ್ಟಿದ್ದೇವೆ" ಎಂದು ಹೇಳಿದ್ದಾರೆ. ಬೇರೆ ಕಡೆ ಮಾಡುತ್ತೇವೆ ಎಂದು ಮಾನ್ಯ ಶಂಕರಮೂರ್ತಿಯವರು ಹೇಳಿಲ್ಲ, ನಾವು ಗುಲ್ಬರ್ಗಾದಲ್ಲೇ ಶಿಫಾರಸ್ಸು ಮಾಡಿರುವಂತೆ ಮಾಡುತ್ತೇವೆಂದು council ನಲ್ಲಿ ಹೇಳಿದ್ದೀರಿ.